ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Swabhimani Sahakari

Pages : 36 / 12₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 17
Issue - 02
February - 2020

ಬ್ಯಾಂಕ್ ಠೇವಣಿ ವಿಮೆ ರೂ.1 ಲಕ್ಷದಿಂದ ರೂ.5 ಲಕ್ಷಕ್ಕೆ ಹೆಚ್ಚಳ.

## ಆಕಾಂಕ್ಷೆಯ ಭಾರತಕ್ಕಾಗಿ ಆರ್ಥಿಕ ಪ್ರಗತಿ, ಸಾಮಾಜಿಕ ಕಾಳಜಿಯ ಮೂಲ ಮಂತ್ರದೊಂದಿಗೆ 2020-21ರ ಬಜೆಟ್ ಮಂಡನೆ

ಪಟ್ಟಣ ಸಹಕಾರ ಬ್ಯಾಂಕುಗಳಿಗೆ ತೆರಿಗೆ ದರ ರಿಯಾಯಿತಿ: ಶೇ. 30 ರಿಂದ ಶೇ. 22ಕ್ಕೆ ಇಳಿಕೆ.

ಮುಂದಿನ ಹಣಕಾಸು ವರ್ಷದಿಂದ ಸರಳೀಕೃತ ಜಿ.ಎಸ್.ಟಿ. ರಿಟರ್ನ್ ಸಲ್ಲಿಸುವ ವ್ಯವಸ್ಥೆ ಜಾರಿಗೆ.

ಕೃಷಿ ಮತ್ತು ಗ್ರಾಮೀಣ ಜೀವನ ಅಭಿವೃದ್ಧಿಗೆ 16 ಅಂಶಗಳ ಸೂತ್ರ.




ಐದು ವರ್ಷಗಳ ಅವಧಿಗೆ ಮೂಲ ಸೌಕರ್ಯ ವಲಯಕ್ಕೆ ರೂ.103 ಲಕ್ಷ ಕೋಟಿ ಅನುದಾನ.

ಶಿಕ್ಷಣಕ್ಕೆ ರೂ.99,300 ಕೋಟಿ; ಶಿಕ್ಷಣ ಕ್ಷೇತ್ರದಲ್ಲಿ ವಿದೇಶಿ ಬಂಡವಾಳ ಹೂಡಿಕೆಗೆ ಅವಕಾಶ.



21 ಫೆಬ್ರವರಿ 2020
ಮಹಾಶಿವರಾತ್ರಿ

ಸೌಹಾರ್ದ ಸಹಕಾರಿಗಳ ಸಂಖ್ಯೆ : 4927

ಇ-ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1324

ಅಧ್ಯಕ್ಷರ ನುಡಿ



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

> ಈ ಹೋರಾಟಕ್ಕೆ ರಾಜ್ಯದ ಸೌಹಾರ್ದ ಸಹಕಾರಿಗಳು ನೀಡಿದ ಬೆಂಬಲ ಹಾಗೂ ಸಹಕಾರಕ್ಕೆ ಸಂಯುಕ್ತ ಸಹಕಾರಿಯು ತನ್ನ ಕೃತಜ್ಞತೆಯನ್ನು ಸೂಚಿಸುತ್ತದೆ. ಈ ರೀತಿಯ ಒಗ್ಗಟ್ಟಿನ ಹೋರಾಟಕ್ಕೆ ಯಾವಾಗಲೂ ಜಯವಿರುತ್ತದೆ ಎಂಬುದಕ್ಕೆ ಈ ತೀರ್ಪು ಸಾಕ್ಷಿ. ಸಹಕಾರಿ ಸಂಸ್ಥೆಗಳು ಜನಪರವಾಗಿ ಕಾರ್ಯನಿರ್ವಹಿಸುತ್ತವೆ. ಸದಸ್ಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ. ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾಲು ಇದೆ.

# ಸೌಹಾರ್ದ ಸಹಕಾರಿಗಳು ಕೂಡ ಸಹಕಾರ ಸಂಘಗಳು : ಆದಾಯ ತೆರಿಗೆ ವಿನಾಯಿತಿ ಅರ್ಹರು : ಹೈಕೋರ್ಟ ಮಹತ್ವದ ತೀರ್ಪು : ಸೌಹಾರ್ದ ಸಹಕಾರಿಗಳಿಗೆ ಸಂತಸ.

ರಾಜ್ಯದ ಸೌಹಾರ್ದ ಸಹಕಾರಿಗಳಿಗೆಲ್ಲ ಶಿವರಾತ್ರಿ ಹಬ್ಬದ ಶುಭಾಶಯಗಳು. ಜಗತ್ತಿಗೆ ಬರಬಹುದಾದ ಕಂಟಕದ ವಿಷವನ್ನು ತಾನು ಕುಡಿದು ಜಗತ್ತಿಗೆ ಒಳ್ಳೆಯದನ್ನು ಮಾಡಿದ ಜಗದ್ರಕ್ಷಕ ಶಿವಪರಮಾತ್ಮನು ತಮಗೆಲ್ಲ ಶುಭವನ್ನುಂಟು ಮಾಡಲಿ ಎಂದು ಹಾರೈಸುತ್ತೇನೆ.

**ಆತ್ಮೀಯರೆ,**

ಜನವರಿ 16, 2020 ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಅತ್ಯಂತ ಸಂತೋಷವನ್ನು ತಂದಿರುವ ದಿನ. ರಾಜ್ಯದ ಸೌಹಾರ್ದ ಸಹಕಾರಿಗಳು ಸಹಕಾರಿ ಸಂಘಗಳೇ ಅಲ್ಲ ಎಂದು ವ್ಯಾಖ್ಯಾನಿಸಿ ಆದಾಯ ತೆರಿಗೆ ಇಲಾಖೆಯಿಂದ ಅನುಭವಿಸುತ್ತಿದ್ದ ಕಿರುಕುಳದಿಂದ ಮುಕ್ತಿ ಪಡೆದ ದಿನ. ರಾಜ್ಯದ ಹೈಕೋರ್ಟನ ಏಕಸದಸ್ಯ ಪೀಠದ ನ್ಯಾಯಾಧೀಶರಾದ ಗೌರವಾನ್ವಿತ ಶ್ರೀ ಕೃಷ್ಣ ಎಸ್. ದೀಕ್ಷೀತರವರು ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಸಂಯುಕ್ತ ಸಹಕಾರಿಯು ಹಾಕಿದ ರಿಟ್ ಪಿಟಿಶನ್‌ನನ್ನು ಸುದೀರ್ಘವಾಗಿ ಆಲಿಸಿದರು. ಜೊತೆಗೆ ಸ್ವಾಭಿಮಾನಿ ಸಹಕಾರಿಯವರು ಹಾಕಿದ್ದ ರಿಟ್ ಪಿಟಿಶನ್‌ನನ್ನು ಆಲಿಸಿ ನಂತರ ತಾವು ತೀರ್ಪುಕೊಡುವ ಮುನ್ನ ರಾಜ್ಯದ 1997ರ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಗಳನ್ನು, 1959ರ ಕಾಯ್ದೆಯ ಆಶಯಗಳನ್ನು, 97ನೇ ಸಂವಿಧಾನದ ಆಶಯವನ್ನು, ಸಹಕಾರಿ ಕ್ಷೇತ್ರದ ಬಗ್ಗೆ ರಾಷ್ಟ್ರಪಿತ ಗಾಂಧೀಜಿಯವರ ಅಭಿಪ್ರಾಯಗಳನ್ನು ಅಧ್ಯಯನ ಮಾಡಿ ತಮ್ಮ ತೀರ್ಪಿನಲ್ಲಿ ಉಲ್ಲೇಖಿಸಿ ರಾಜ್ಯದ ಸೌಹಾರ್ದ ಸಹಕಾರಿಗಳು ಕೂಡ ಸಹಕಾರಿ ಸಂಘಗಳೆಂದು ಪರಿಗಣಿಸಬೇಕು ಮತ್ತು ಸೌಹಾರ್ದ ಸಹಕಾರಿಗಳು ಆದಾಯ ತೆರಿಗೆ ವಿನಾಯಿತಿಗೆ ಅರ್ಹರು ಎಂದು ಐತಿಹಾಸಿಕ ತೀರ್ಪು ನೀಡಿರುವುದು ರಾಜ್ಯದ ಸೌಹಾರ್ದ ಸಹಕಾರಿಗಳಿಗೆಲ್ಲ ನಿಟ್ಟುಸಿರು ಬಿಡುವಂತಾಗಿದೆ.

ಈ ಹೋರಾಟಕ್ಕೆ ರಾಜ್ಯದ ಸೌಹಾರ್ದ ಸಹಕಾರಿಗಳು ನೀಡಿದ ಬೆಂಬಲ ಹಾಗೂ ಸಹಕಾರಕ್ಕೆ ಸಂಯುಕ್ತ ಸಹಕಾರಿಯು ತನ್ನ ಕೃತಜ್ಞತೆಯನ್ನು ಸೂಚಿಸುತ್ತದೆ. ಈ ರೀತಿಯ ಒಗ್ಗಟ್ಟಿನ ಹೋರಾಟಕ್ಕೆ ಯಾವಾಗಲೂ ಜಯವಿರುತ್ತದೆ ಎಂಬುದಕ್ಕೆ ಈ ತೀರ್ಪು ಸಾಕ್ಷಿ.

**ಕೇಂದ್ರದ ಬಜೆಟ್ ಸಹಕಾರಿ ಕ್ಷೇತ್ರಕ್ಕೆ ಆಶಾದಾಯಕ,**

ಫೆಬ್ರವರಿ 1ರಂದು ಕೇಂದ್ರ ಸಚಿವೆ ಶ್ರೀಮತಿ ನಿರ್ಮಲ ಸೀತಾರಾಮನ್ ರವರು ಮಂಡಿಸಿದ ಬಜೆಟ್ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿದೆ. ಕೇಂದ್ರ ಹಣಕಾಸು ಸಚಿವರನ್ನು ಭೇಟಿ ಮಾಡಿ ಕೆಲವು ಜ್ವಲಂತ ಸಮಸ್ಯೆಗಳ ಬಗ್ಗೆ ಮನವರಿಕೆ ಮಾಡಿಕೊಡಲಾಗಿತ್ತು. ಇದರ ಪರಿಣಾಮವಾಗಿ ಸಹಕಾರ ಬ್ಯಾಂಕುಗಳು ಆದಾಯ ತೆರಿಗೆ ಪಾವತಿ ಪ್ರಮಾಣವನ್ನು ಶೇಕಡಾ 30 ರಿಂದ 22ಕ್ಕೆ ಇಳಿಸಿರುವುದು ಠೇವಣಿ ವಿಮಾ ಮೊತ್ತವನ್ನು 1 ಲಕ್ಷದಿಂದ 5 ಲಕ್ಷಕ್ಕೆ ಏರಿಸಿರುವುದು, ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ ಹಾಗೂ ಆದಾಯ ತೆರಿಗೆ ಕಾಯ್ದೆಗಳಲ್ಲಿ ತಿದ್ದುಪಡಿಗೆ ಕ್ರಮವಿಡುವುದಾಗಿ ಮತ್ತು ಮೂಲ ಸೌಕರ್ಯ ಅಭಿವೃದ್ಧಿಗೆ ಗಮನ ಹರಿಸಿ ಸಹಕಾರ ಕ್ಷೇತ್ರವನ್ನು ಬಲಪಡಿಸುವ ನಿಟ್ಟಿನಲ್ಲಿ ಕ್ರಮವಿಡುವುದಾಗಿ ತಿಳಿಸಿರುವುದು ಸಹಕಾರಿಗಳಿಗೆ ಈ ಬಜೆಟ್ ಆಶಾದಾಯಕ ಎಂದು ಅಭಿಪ್ರಾಯ ಪಡಬಹುದಾಗಿದೆ.

ಸಹಕಾರಿ ಸಂಸ್ಥೆಗಳು ಜನಪರವಾಗಿ ಕಾರ್ಯನಿರ್ವಹಿಸುತ್ತವೆ. ಸದಸ್ಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ. ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾಲು ಇದೆ. ಆದರೆ ಕಳೆದ ಕೆಲವು ದಿನಗಳಿಂದ ಆದಾಯ ತೆರಿಗೆ ಇಲಾಖೆಯವರು ಬೇರೆ ಬೇರೆ ವಿಷಯಗಳ ಬಗ್ಗೆ ಸಹಕಾರ ಸಂಸ್ಥೆಗಳಿಗೆ ಆದಾಯ ತೆರಿಗೆಯನ್ನು ಪಾವತಿಸಲು ಬರುತ್ತಿರುವ ತಗಾದೆಗಳು ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿಲ್ಲ ಇದರಿಂದ ಸಹಕಾರಿ ಸಂಸ್ಥೆಗಳಿಗೆ ತೀವ್ರ ಹಿನ್ನಡೆಯಾಗುತ್ತದೆ ಈ ಬಗ್ಗೆ ಪರಿಶೀಲಿಸಿ ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳ ಅಭಿವೃದ್ಧಿಗೆ ಪೂರಕವಾಗುವಂತೆ ಆದಾಯ ತೆರಿಗೆ ಕಾಯ್ದೆಯ ಕೆಲವು ಕಲಂಗಳಲ್ಲಿ ವಿನಾಯಿತಿಗಳನ್ನು ಹಾಗೂ ಕೆಲವು ಕಲಂಗಳಲ್ಲಿ ತಿದ್ದುಪಡಿಗಳನ್ನು ಮಾಡುವ ಅಗತ್ಯತೆಯ ಬಗ್ಗೆ ರಾಷ್ಟ್ರೀಯ ಸಹಕಾರ ಭಾರತಿ ನೇತೃತ್ವದಲ್ಲಿ ನಿಯೋಗ ಹೋಗಿ ಕೇಂದ್ರ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರ ಜೊತೆಗೆ ಚರ್ಚಿಸಿ ಸಹಕಾರ ಕ್ಷೇತ್ರ ಅಭಿವೃದ್ಧಿಗೆ ಅವರ ನೆರವು ಕೋರಿದೆ. ಹಣಕಾಸು ಸಚಿವರ ಜೊತೆಗಿನ ಭೇಟಿ ತೃಪ್ತಿ ತಂದಿದೆ. ಮುಂಬರುವ ದಿನಗಳಲ್ಲಿ ಸಹಕಾರ ಸಂಸ್ಥೆಗಳ ಅಭಿವೃದ್ಧಿಗೆ ಪೂರಕವಾದ ಕ್ರಮಗಳನ್ನು ಕೇಂದ್ರ ಜಾರಿಮಾಡಲಿದೆ ಎಂಬ ಭರವಸೆ ಇದೆ. ಕಾದು ನೋಡೋಣ.

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

**ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ**
ಗೌರವ ಅಧ್ಯಕ್ಷರು

**ಶ್ರೀ ಜಗದೀಶ ಕವಟಗಿಮಠ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ ಪಾಟೀಲ**
ಸಂಪಾದಕರು

**ಶ್ರೀ ವಿ.ಜೆ. ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ............................................ 5–20
ರಾಜ್ಯ ಉಚ್ಛ ನ್ಯಾಯಾಲಯದ ಆದೇಶ .... ............................................ 21–24
ಸೌಹಾರ್ದ ಸಹಕಾರಿಗಳ ಸಮಾಚಾರಗಳು ... ................................................ 25–32
ಲೇಖನ........................................ 33–36

# ಸಂಪಾದಕೀಯ

## ಅಂತರರಾಜ್ಯ ಮಟ್ಟದಲ್ಲಿ ಸಂಯುಕ್ತ ಸಹಕಾರಿಯ ತರಬೇತಿಗೆ ಅವಕಾಶ.

## ಸಂಯುಕ್ತ ಸಹಕಾರಿಯ ತರಬೇತಿಯ ಗರಿಮೆ

ಕಳೆದ ತಿಂಗಳು ಮುಂಬೈನ ವೆಸ್ಟರ್ನ ರೇಲ್ವೆ ನೌಕರರು ಮಾಡಿಕೊಂಡಿರುವ ಜಾಕ್ಸನ್ ಸಹಕಾರಿ ಸಂಘ ಆಡಳಿತ ಮಂಡಳಿಯವರು ನ್ಯಾಶನಲ್ ಕೋ–ಆಪರೇಟಿವ್ ಯೂನಿಯನ್‌ನ "ದಿ ಕೋ–ಆಪರೇಟರ್" ಸಂಯುಕ್ತ ಸಹಕಾರಿಯ ಜಾಹೀರಾತು ಗಮನಿಸಿ ತಮ್ಮ ಸಂಸ್ಥೆಯ 21 ಜನ ಆಡಳಿತ ಮಂಡಳಿಯವರಿಗೆ ತರಬೇತಿ ನೀಡಲು ಮನವಿ ಸಲ್ಲಿಸಿರುವುದನ್ನು ಪರಿಗಣಿಸಿ ಬೆಂಗಳೂರಿನಲ್ಲಿ ದಿನಾಂಕ 05.01.2020 ರಂದು 1 ದಿನದ ತರಬೇತಿ ಕಾರ್ಯಕ್ರಮವನ್ನು ವ್ಯವಸ್ಥೆ ಮಾಡಿರುವುದು ತರಬೇತಿಯಲ್ಲಿ ಭಾಗವಹಿಸಿದ ಸದರಿ ಸಂಸ್ಥೆಯ ನಿರ್ದೇಶಕರುಗಳು ಅವರುಗಳ ಜೀವಮಾನದುದ್ದಕ್ಕೂ ಅನೇಕ ತರಬೇತಿಗಳಲ್ಲಿ ಭಾಗವಹಿಸಿದ ಅನುಭವ ಇದೆ. ಆದರೆ ಸಂಯುಕ್ತ ಸಹಕಾರಿಯು ಏರ್ಪಡಿಸಿದ ತರಬೇತಿ ಕಾರ್ಯಕ್ರಮ ಅತ್ಯಂತ ಉನ್ನತ ಮಟ್ಟದ್ದಾಗಿತ್ತು ಎಂದು ತಿಳಿಸಿರುವುದು ಸಂಯುಕ್ತ ಸಹಕಾರಿಗೆ ಹೆಮ್ಮೆಯ ವಿಷಯ. ಅದೇ ರೀತಿ ತೆಲಂಗಾಣದ ಮಾಕ್ಸ್ ಸಹಕಾರಿ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 6 ಫೆಡರೇಶನ್‌ಗಳ 47 ಅಧ್ಯಕ್ಷರು, ನಿರ್ದೇಶಕರು ಮತ್ತು ಸಹಕಾರಿಗಳು ಇದೇ ದಿನಾಂಕ ಜನವರಿ 27 & 28 ಬೆಂಗಳೂರಿಗೆ ಹಾಗೂ ಶಿರಸಿಗೆ ಭೇಟಿ ನೀಡಿ ತರಬೇತಿ ಹಾಗೂ ಅಧ್ಯಯನ ನಡೆಸುವುದರೊಂದಿಗೆ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳನ್ನೂ ಮೆಚ್ಚಿಕೊಂಡಿದ್ದಾರೆ ಮತ್ತು ಕರ್ನಾಟಕದ ಸೌಹಾರ್ದ ಸಹಕಾರಿ ಕಾಯ್ದೆ ಮತ್ತು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು ಅನುಕರಣೀಯ ಎಂದು ತಿಳಿಸಿರುವುದು ನಮ್ಮ ಕಾರ್ಯಚಟುವಟಿಕೆಗಳಿಗೆ ಕೈಗನ್ನಡಿಯಾಗಿದೆ.

ಸಂಯುಕ್ತ ಸಹಕಾರಿಯ ಧ್ಯೇಯ ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣದ ವೃತ್ತಿಪರ, ಪಾರದರ್ಶಕ ಹಾಗೂ ಉತ್ತರದಾಯಿತ್ವದ ಸಹಕಾರಿ ವ್ಯವಸ್ಥೆಯ ನಿರ್ಮಾಣವಾಗಿರುವುದರಿಂದ ಸಂಯುಕ್ತ ಸಹಕಾರಿಯು ರಾಜ್ಯಾದ್ಯಂತ ಕಳೆದ ಡಿಸೆಂಬರ 2019 ಹಾಗೂ ಜನವರಿ 2020ರಲ್ಲಿ ವಿವಿಧ ಸ್ಥಳಗಳಲ್ಲಿ ನಡೆಸಿದ ಮುಖ್ಯ ಕಾರ್ಯನಿರ್ವಾಹಕರುಗಳ 52 ಸಭೆಗಳು ಅದರಲ್ಲಿ ಭಾಗವಹಿಸುವಿಕೆ ಶಿಸ್ತು ಮತ್ತು ವಿಷಯ ಮಂಡನೆ ಇವೆಲ್ಲವೂ ಸಂಯುಕ್ತ ಸಹಕಾರಿ ತರಬೇತಿ ನೀಡುವುದರಲ್ಲಿ ಪರಿಣಿತಿಯನ್ನು ಪಡೆಯುತ್ತಲಿದೆ. ಸಹಕಾರಿ ಕ್ಷೇತ್ರದಲ್ಲಿ ತರಬೇತಿ ನೀಡುವುದರಲ್ಲಿ ರಾಜ್ಯದಲ್ಲಿ ಮುಂಚೂಣಿಯಲ್ಲಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ಸಂಯುಕ್ತ ಸಹಕಾರಿಯ ಅಧಿಕಾರಿಗಳೆಲ್ಲರೂ ತಮ್ಮ ಜ್ಞಾನದ ಮಟ್ಟವನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಯಾವುದೇ ಸಂದರ್ಭದಲ್ಲಿ ಯಾವುದೇ ವಿಷಯದ ಬಗ್ಗೆ ನಿರರ್ಗಳವಾಗಿ ಮಾತನಾಡುವ ಶಕ್ತಿಯನ್ನು ಬೆಳಸಿಕೊಳ್ಳುವುದಕ್ಕೆ ಯಾವುದೇ ಬಾಹ್ಯ ಶಕ್ತಿಯನ್ನು ಅವಲಂಬಿಸದೆ ತರಬೇತಿಗಳನ್ನು ನಿರ್ವಹಿಸುವ ಕಾರ್ಯಕ್ಷಮತೆಯನ್ನು ವೃದ್ಧಿಸಿಕೊಳ್ಳುವ ಅಗತ್ಯತೆ ಉದ್ಭವವಾಗಿರುವುದು ಸಂಯುಕ್ತ ಸಹಕಾರಿಯ ಅಧಿಕಾರಿಗಳಿಗೆ ಸದಾವಕಾಶ ಇದಾಗಿದೆ. ಸಂಯುಕ್ತ ಸಹಕಾರಿಯ ತರಬೇತಿಗಳಿಗೆ ಇದೊಂದು ಹೆಮ್ಮೆಯ ವಿಷಯ.

## "ನಿನ್ನ ದುಡಿಮೆಯಿಂದ ತೃಪ್ತಿ ಪಡೆ"

ಸತ್ಯ ಶುದ್ಧ ಕಾಯಕಧಾರಿಯಾಗಿದ್ದ ಭಕ್ತಿ ಭಂಡಾರಿ ಬಸವಣ್ಣನವರು ತಮ್ಮ ಶುದ್ಧ ನಡೆಯ ಮೂಲಕವೇ ಜನಾದರ್ಶಿಗಳಾಗಿ "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲ ಸಂಗಮನನೊಲಿಸುವ ಪರಿ" ಎನ್ನುವ ಮೂಲಕ ಭಗವಂತ ನೀಡಿರುವ ಪಂಚಭೂತಗಳ ನೆರವಿನಿಂದ ದೇಹಶ್ರಮವನ್ನಾಧರಿಸಿ ಪರಾವಲಂಬಿಗಳಾಗದೇ ಸ್ವಾವಲಂಬಿ ಹಾಗೂ ಸ್ವಾಭಿಮಾನಿಗಳಾಗಿರೆಂದು ತತ್ವಭೋಧನೆ ಮಾಡಿರುತ್ತಾರೆ. ಆದರೆ ಇದಕ್ಕೆ ತದ್ವಿರುದ್ಧವಾಗಿ ಇಂದಿನ ನಾವುಗಳು ಸ್ವಂತ ದುಡಿಮೆಯ ಗೊಡವೆಗೆ ಹೋಗದೆ ಭ್ರಷ್ಟಾಚಾರ, ಲಂಚಗುಳಿತನ ಹಾಗೂ ಇತರರ ಶ್ರಮಗಳಿಂದ ಹಣ ಲಪಟಾಯಿಸುವುದನ್ನು ಕಂಡ ಆಧ್ಯಾತ್ಮಕ ಕವಿ ಡಿ.ವಿ.ಜಿ.ಯವರು ಇದೇ ತತ್ವಕ್ಕೆ ಸಮಾನಾಂತರವಾಗಿ ಪ್ರಾಯೋಗಿಕ ಉದಾಹರಣೆಯನ್ನು ನೀಡುತ್ತಿದ್ದಾರೆ. ತಮ್ಮ ತಮ್ಮ ಶ್ರಮದಿಂದ ದುಡಿದ ಅನ್ನವನ್ನು ಸಂತೋಷದಿಂದ ಸ್ವೀಕರಿಸಿ ದೇಹದಾರ್ಢ್ಯತೆಯನ್ನು ಪಡೆಯಿರಿ ಮತ್ತು ಇತರರ ದುಡಿಮೆಗೆ ಕೈಹಾಕದಿರಿ ಎಂಬ ಸಂದೇಶದ ಮೂಲಕ ಬೇರೆಯವರ ಶ್ರಮದ ಫಲವನ್ನು ತಿನ್ನುವಿರಾದರೆ ಅದು ಜೀರ್ಣವಾಗದ ಋಣವಾಗಿ ಉಳಿಯುತ್ತದೆಯೆಂಬ ಎಚ್ಚರಿಕೆ ಸಂದೇಶವನ್ನು ಈ ಕೆಳಗಿನ ಪದ್ಯದಲ್ಲಿ ಸೊಗಸಾಗಿ ಚಿತ್ರೀಕೃತವಾದಂತೆ ಬಣ್ಣಿಸಿದ್ದಾರೆ.

ಶ್ರೇಣಿ 45



## ಜ್ಞಾನ ಜ್ಯೋತಿ

ಎಂ .ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

ಅನ್ನವುಣುವಂದು ಕೇಳ್: ಅದನು ಬೇಯಿಸಿದ ನೀರ್
ನಿನ್ನ ದುಡಿಮೆಯ ಬೆವರೋ ಪೆರರ ಕಣ್ಣೀರೋ
ತಿನ್ನು ನೀ ಜಗಕೆ ತಿನಲಿತ್ತನಿತ ಮಿಕ್ಕೂಟ
ಜೀರ್ಣಿಸದ ಋಣಶೇಷ ॥ ಮಂಕುತಿಮ್ಮ ॥

ಪದ್ಯದಲ್ಲಿ ಪ್ರಸ್ತಾಪಿತವಾಗಿರುವ ಸಂದರ್ಭ ಊಟದ ಸಮಯ. ಊಟ ಮಾಡುವ ಸಂದರ್ಭದಲ್ಲಿ ಅನ್ನದ ಮುಂದೆ ಕುಳಿತಾಗ ನಿನ್ನನ್ನೇ ನೀನು ಕೇಳಿಕೋ ಅದು ನಿನ್ನ ದೇಹ ಶ್ರಮದಿಂದ ದುಡಿದದ್ದೋ ಅಥವಾ ಇನ್ನಾರದೋ ಶ್ರಮದಿಂದ ಪಡೆದದ್ದೋ ? ನಿನ್ನ ದುಡಿಮೆಯಿಂದ ಬಂದದನ್ನ ಭುಜಿಸುವ ಕಾರ್ಯತತ್ವರತೆಯನ್ನು ತಂದುಕೋ. ತನ್ಮೂಲಕ ತಮ್ಮ ತಮ್ಮ ಶ್ರಮದಿಂದ ಬದುಕಲು ಕಲಿತೊಡನೆಯೇ ಸುಂದರ ಸಮಾಜ ನಿರ್ಮಾಣವಾದಂತೆ ಎನ್ನುವ ಮೂಲಕ "ನೀನು ಬದುಕು ಇತರರನ್ನು ಬದುಕಲು ಬಿಡು" (Live and Let Live) ಎಂಬ ಸಂದೇಶವನ್ನು ಸಾರಿದ್ದಾರೆ. ಹಾಗೂ ಮುಂಬರುವ ಸಮಾಜದ ಶುದ್ಧತೆಗೆ ಕರೆಯುತ್ತಿದ್ದಾರೆ. ಈ ಉದಾಹರಣಾರ್ಥ ಸಂದೇಶವನ್ನು ನೈಜ ಅನುಷ್ಠಾನಕ್ಕೆ ತರುವ ಮೂಲಕ ಮುಂದಿನ ಪೀಳಿಗೆಗೆ ಉತ್ತಮ ಸಮಾಜವನ್ನು ನೀಡೋಣವೆಂಬುದೇ ಈ ಪದ್ಯದ ಸಂದೇಶವಾಗಿದೆ. ತತಕ್ಕಾರಣ ಕವಿ ವಾಣಿಯನ್ನು ಅನುಸರಿಸೋಣ, ಆದರ್ಶದತ್ತ ಹೆಜ್ಜೆ ಹಾಕೋಣ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ:–8,216, ಬೆಂಗಳೂರು:–1,882, ಮೈಸೂರು:–898 ಹಾಗೂ ಕಲಬುರಗಿ:–2041 ವಿಭಾಗಗಳಿಂದ ದಾಖಲಾದ ದಾವಾ ಪ್ರಕರಣಗಳ ಒಟ್ಟು 13,037 ಆಗಿರುತ್ತದೆ. ಇವುಗಳ ಪೈಕಿ 6,070 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 6,967.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 2,154 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 222 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 146 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 1786 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 998 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 89 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 80 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 829 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ.

## ಸಹಕಾರ ಭಾರತಿ ನೇತೃತ್ವದಲ್ಲಿ

# ಆದಾಯ ತೆರಿಗೆ ತೊಂದರೆಗಳ ನಿವಾರಣೆಗೆ ಹಾಗೂ ಕೇಂದ್ರ ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್ ಇವರ ಭೇಟಿ



**ನವದೆಹಲಿ:** ದಿನಾಂಕ 20.01.2020 ರಂದು ಕೇಂದ್ರ ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್‌ರೊಂದಿಗೆ ಸಹಕಾರ ಭಾರತೀಯ ಸಭೆ ಯಶಸ್ವಿಯಾಗಿ ಜರುಗಿತು. ಸಹಕಾರ ಕ್ಷೇತ್ರಕ್ಕೆ ಅನೇಕ ಆದಾಯ ತೆರಿಗೆ ತೊಂದರೆಗಳು ಎದುರಾಗಿವೆ, ಅವುಗಳೆಂದರೆ,

- ಸಹಕಾರ ಸಂಸ್ಥೆಗಳಿಗೆ 80ಪಿ ಅಡಿಯಲ್ಲಿ ತೆರಿಗೆ ವಿನಾಯಿತಿ ಇದ್ದರೂ ಆದಾಯ ತೆರಿಗೆ ಅಧಿಕಾರಿಗಳು ನೋಟೀಸ್ ನೀಡುವ ಮೂಲಕ ಗೊಂದಲ ಮೂಡಿಸುತ್ತಿರುವುದು.
- ರಾಜ್ಯ ಕಾಯ್ದೆಯಲ್ಲಿರುವ ಸಹ ಸದಸ್ಯರು ಹಾಗೂ ನಾಮ ಮಾತ್ರ ಸದಸ್ಯರ ಅವಕಾಶವನ್ನು ಪರಿಗಣಿಸದೆ ಇವರೊಂದಿಗಿನ ವ್ಯವಹಾರಕ್ಕೆ ತೆರಿಗೆ ವಿಧಿಸುತ್ತಿರುವುದು,
- ಸಹಕಾರ ಬ್ಯಾಂಕುಗಳಿಗೆ ಅನ್ವಯವಾಗುವ ಪ್ರಾವಧಾನವನ್ನು ಸಹಕಾರ ಸಂಸ್ಥೆಗಳಿಗೂ ಅನ್ವಯಿಸುತ್ತಿರುವುದು.
- ಸಹಕಾರಿಗಳು ಬ್ಯಾಂಕಿನಲ್ಲಿಟ್ಟಿರುವ ಮೀಸಲು ನಿಧಿಗಳ ಮೇಲಿನ ಬಡ್ಡಿಗೆ ತೆರಿಗೆ ಪಾವತಿಸಲು ಸೂಚಿಸುತ್ತಿರುವುದು.
- ಸಹಕಾರ ಕ್ಷೇತ್ರಕ್ಕೆ ಮಾರಕವಾಗುವಂತಹ ಸೆಕ್ಷನ್‌ಗಳಾದ 269ಎಸ್‌ಟಿ, 194ಎನ್ ಮೂಲಕ ನಗದು ವ್ಯವಹಾರಕ್ಕೆ ಕಡಿವಾಣ ವಿಧಿಸುತ್ತಿರುವುದು.
- 269ಎಸ್‌ಎಸ್ ಹಾಗೂ 269ಟಿ ಮೂಲಕ ಸಾಲ ಹಾಗೂ ಠೇವಣಿ ವ್ಯವಹಾರಗಳಿಗೆ ರೂ.20,000/-ಗಳ ನಗದು ಮಿತಿ ವಿಧಿಸಿರುವುದು.
- ಅಪನಗದೀಕರಣದ ಸಂದರ್ಭದಲ್ಲಿ ಸದಸ್ಯರಿಂದ ಬಂದಿರುವ, ಬ್ಯಾಂಕಿಗೆ ಜಮಾ ಮಾಡಲಾದ ಕರೆನ್ಸಿ ನೋಟುಗಳ ಮೊತ್ತಕ್ಕೆ ಸಮನಾದ ಮೊತ್ತವನ್ನು ದಂಡ ಮತ್ತು ಬಡ್ಡಿಯಾಗಿ ವಿಧಿಸುವ ಬಗ್ಗೆ ನೋಟೀಸ್ ನೀಡುತ್ತಿರುವುದು.

ಈ ಎಲ್ಲ ತೊಂದರೆಗಳ ನಿವಾರಣೆಯಲ್ಲಿ ಕೂಡ ಸಂಯುಕ್ತ ಸಹಕಾರಿಯು, ರಾಷ್ಟ್ರಮಟ್ಟದ ಸಂಸ್ಥೆಯಾದ ಸಹಕಾರ ಭಾರತಿಯೊಂದಿಗೆ ಸಮನ್ವಯ ಸಾಧಿಸಿಕೊಂಡು ಅಗತ್ಯ ಪ್ರಯತ್ನಗಳನ್ನು ನಡೆಸುತ್ತಿದೆ. ಪ್ರಸ್ತುತ 20 ಜನವರಿ 2020ರಂದು ಮಾನ್ಯ ಹಣಕಾಸು ಸಚಿವರು ಬಜೆಟ್ ಪೂರ್ವ ಸಿದ್ಧತೆ ಹಾಗೂ ಸಹಕಾರ ಕ್ಷೇತ್ರದ ಆದಾಯ ತೆರಿಗೆ ತೊಂದರೆಗಳ ನಿವಾರಣೆ ಕುರಿತಂತೆ ಸಹಕಾರ ಭಾರತಿಯ ಸಭೆ ನಡೆಸಿದ್ದು, ಇದರಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ಸಹಕಾರ ಭಾರತಿಯ ರಾಜ್ಯ ಪ್ರಧಾನ ಕಾರ್ಯದರ್ಶಿಯಾದ ಶ್ರೀ ಬಿ. ಹೆಚ್ ಕೃಷ್ಣಾರೆಡ್ಡಿಯವರು ಕೂಡ ಭಾಗವಹಿಸಿದ್ದಾರೆ. ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸಮಗ್ರವಾದ ಮನವಿಯನ್ನು ಈ ಸಂದರ್ಭದಲ್ಲಿ ಮಾನ್ಯ ಹಣಕಾಸು ಸಚಿವರಿಗೆ ಸಲ್ಲಿಸಿ ಸಹಕಾರ ಕ್ಷೇತ್ರದ ಆದಾಯ ತೆರಿಗೆ ಸಮಸ್ಯೆಗಳ ಬಗ್ಗೆ ಮಾನ್ಯ ಹಣಕಾಸು ಸಚಿವರಿಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಲಾಗಿದೆ. ಮಾನ್ಯ ಹಣಕಾಸು ಸಚಿವರು ಈ ಬಗ್ಗೆ ಪೂರಕವಾಗಿ ಸ್ಪಂದಿಸಿದ್ದು, ಸಮಸ್ಯೆಗಳ ನಿವಾರಣೆಗೆ ಅಗತ್ಯ ಕ್ರಮವಿಡುವ ಭರವಸೆ ನೀಡಿರುವುದು ಸೌಹಾರ್ದ ಸಹಕಾರಿಗಳಿಗೆ ನೆಮ್ಮದಿ ತಂದಿದೆ.

ಈ ಸಂದರ್ಭದಲ್ಲಿ ಶ್ರೀ ಸತೀಶ ಮರಾಠೆ, ಆರ್.ಬಿ.ಐ ನಿರ್ದೇಶಕರು ಹಾಗೂ ಸಹಕಾರ ಭಾರತಿಯ ಮಹಾಪೋಷಕರು, ಶ್ರೀ ರಮೇಶ ವೈದ್ಯ, ಸಹಕಾರ ಭಾರತಿಯ ರಾಷ್ಟ್ರೀಯ ಅಧ್ಯಕ್ಷರು, ಶ್ರೀ ಉದಯ್ ಜೋಶಿ, ಸಹಕಾರ ಭಾರತಿಯ ರಾಷ್ಟ್ರೀಯ ಕಾರ್ಯದರ್ಶಿ, ಶ್ರೀ ಸಂಜಯ್ ಪಾಚಪುರ, ಸಹಕಾರ ಭಾರತಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ, ಶ್ರೀ ಎಸ್ ಆರ್ ಸತೀಶ್ಚಂದ್ರ, ಸಹಕಾರ ಭಾರತಿಯ ರಾಜ್ಯಾಧ್ಯಕ್ಷರು ಹಾಗೂ ಕ್ಯಾಂಪ್ಕೋ ಅಧ್ಯಕ್ಷರು, ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿ, ಸಹಕಾರ ಭಾರತಿಯ ರಾಜ್ಯ ಕಾರ್ಯದರ್ಶಿ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಶ್ರೀ ಶರಣಗೌಡ ಜಿ ಪಾಟೀಲ್, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರು, ಸನ್ನದು ಲೆಕ್ಕ ಪರಿಶೋಧಕರಾದ ಶ್ರೀ ಕೃಷ್ಣ ಇವರುಗಳು ಈ ಸಭೆಯಲ್ಲಿ ಭಾಗವಹಿಸಿದ್ದರು.

### ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿಗೆ ಪ್ರಯತ್ನ :

ಸೌಹಾರ್ದ ಸಹಕಾರ ಕ್ಷೇತ್ರದ ಆದಾಯ ತೆರಿಗೆ ತೊಂದರೆ ನಿವಾರಣೆಯ ದೃಷ್ಟಿಯಿಂದ ಸೌಹಾರ್ದ ಸಹಕಾರಿಗಳು ಕೂಡ "ಸಹಕಾರ ಸಂಘ" ಎಂದು ಸೌಹಾರ್ದ ಸಹಕಾರಿ ಕಾಯ್ದೆಗೆ ಅಗತ್ಯ ತಿದ್ದುಪಡಿ ಮಾಡಿಕೊಡಲು ಅಥವಾ ಅಧ್ಯಾದೇಶ ಹೊರಡಿಸಲು ಮಾನ್ಯ ಮುಖ್ಯಮಂತ್ರಿಗಳನ್ನು, ಮಾನ್ಯ ಗೃಹ ಹಾಗೂ ಸಹಕಾರ ಸಚಿವರಾದ ಶ್ರೀ ಬಸವರಾಜ ಬೊಮ್ಮಾಯಿಯವರನ್ನು ಹಾಗೂ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ಇಲಾಖೆಯ ಸಚಿವರಾಗಿರುವ ಶ್ರೀ ಮಾಧುಸ್ವಾಮಿಯವರನ್ನು ವಿನಂತಿಸಿಕೊಳ್ಳಲಾಗಿದ್ದು, ಶ್ರೀಯುತರು ಇದಕ್ಕೆ ಒಪ್ಪಿಗೆ ನೀಡಿರುತ್ತಾರೆ. ಅಧ್ಯಾದೇಶ ಹೊರಡಿಸುವ ಕಾಯ್ದೆ ತಿದ್ದುಪಡಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ. ಇದೇ ಸಂದರ್ಭದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪು ಬಂದಿರುವುದು ಸೌಹಾರ್ದ ಸಹಕಾರಿಗಳಿಗೆ ಪೂರಕವಾಗಿದೆ.

# ಸಹಕಾರ ಸಚಿವರ ಅಧ್ಯಕ್ಷತೆಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿ ಕುರಿತು ಸಭೆ



**ಬೆಂಗಳೂರು:** ಮಾನ್ಯ ಗೃಹ ಸಚಿವರು ಹಾಗೂ ಸಹಕಾರ ಸಚಿವರಾದ ಶ್ರೀ ಬಸವರಾಜ ಬೊಮ್ಮಾಯಿ ಇವರ ಅಧ್ಯಕ್ಷತೆಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿ ಕುರಿತು ದಿನಾಂಕ 01.02.2020 ರಂದು ಸಹಕಾರಿಗಳ ನಿಬಂಧಕರ ಕಚೇರಿಯಲ್ಲಿ ಸಭೆ ನಡೆಯಿತು. ಸಂಯುಕ್ತ ಸಹಕಾರಿ ಕೋರಿದ ಬಹುತೇಕ ತಿದ್ದುಪಡಿಗಳನ್ನು ಮಾನ್ಯ ಸಹಕಾರ ಸಚಿವರು ಅನುಮೋದಿಸಿರುತ್ತಾರೆ. ಕೆಲವನ್ನು ಸೂಕ್ತ ಕಾರಣಗಳನ್ನು ತಿಳಿಸುವ ಮೂಲಕ ನಿರಾಕರಿಸಿರುತ್ತಾರೆ.

ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿ, ಮಾನ್ಯ ಸಹಕಾರಿಗಳ ನಿಬಂಧಕರು ಶ್ರೀ ಪ್ರಸನ್ನ ಕುಮಾರ್, ಸಹಕಾರ ಇಲಾಖೆಯ OSD ಶ್ರೀಮತಿ ಆಶಾ, ನಿಬಂಧಕರ ಕಚೇರಿ, ಕಾನೂನು ಕೋಶದ ಜಂಟಿ ನಿಬಂಧಕರು ಶ್ರೀ ಎಂ ಡಿ ನರಸಿಂಹ ಮೂರ್ತಿ, ಸಂಯುಕ್ತ ಸಹಕಾರಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ನಿಬಂಧಕರ ಕಛೇರಿಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಸಹಕಾರ ಸಚಿವ ಶ್ರೀ ಬಸವರಾಜು ಬೊಮ್ಮಾಯಿಯವರಿಂದ ಸಂಯುಕ್ತ ಸಹಕಾರಿಯ 2020ರ ನೂತನ ಕ್ಯಾಲೆಂಡರ್, ಡೈರಿ, ಟೇಬಲ್ ಕ್ಯಾಲೆಂಡರ್ ಬಿಡುಗಡೆ



**ಬೆಂಗಳೂರು:** ದಿನಾಂಕ 06.01.2020 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ 2020ರ ನೂತನ ಕ್ಯಾಲೆಂಡರ್, ಡೈರಿ, ಟೇಬಲ್ ಕ್ಯಾಲೆಂಡರ್ ಗಳನ್ನು ಮಾನ್ಯ ಗೃಹ ಹಾಗೂ ಸಹಕಾರ ಸಚಿವರಾದ ಶ್ರೀ ಬಸವರಾಜ ಬೊಮ್ಮಾಯಿ ಇವರು ಬಿಡುಗಡೆ ಮಾಡಿದರು.

ಇದೇ ಸಂದರ್ಭದಲ್ಲಿ ಸಹಕಾರ ಸಂಸ್ಥೆಗಳಿಗೆ ಆಗುತ್ತಿರುವ ಆದಾಯ ತೆರಿಗೆ ತೊಂದರೆಗಳ ಕುರಿತಂತೆ ಕೂಡ ಚರ್ಚಿಸಲಾಗಿದೆ. ಮಾನ್ಯ ಸಚಿವರಿಂದ ಸಕಾರಾತ್ಮಕ ಸ್ಪಂದನೆ ದೊರೆತಿದೆ. ಸೌಹಾರ್ದ ಸಹಕಾರಿಗಳ ತೊಂದರೆ ನಿವಾರಣೆಗಾಗಿ ಕಾಯ್ದೆ ತಿದ್ದುಪಡಿಗೆ ಕ್ರಮವಿಡಲಾಗುವುದು ಎಂದು ಮಾನ್ಯ ಸಚಿವರು ತಿಳಿಸಿದರು.

ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿ, ನಿರ್ದೇಶಕರಾದ ಶ್ರೀ ಬಿ ಎಸ್ ಗುಂಡುರಾವ್, ಯು.ಕೆ ಸೌಹಾರ್ದ ಸಹಕಾರಿ ನಿ., ಯಲ್ಲಾಪುರ ಇದರ ಅಧ್ಯಕ್ಷರಾದ ಶ್ರೀ ಪ್ರಮೋದ್ ಹೆಗಡೆ, ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ್ ಉಪಸ್ಥಿತರಿದ್ದರು.

# ಮುಂಬೈ ಮೂಲದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯಿಂದ ತರಬೇತಿ



**ಬೆಂಗಳೂರು:** ದಿನಾಂಕ 5ನೇ ಜನವರಿ 2020ರಂದು ಸಂಯುಕ್ತ ಸಹಕಾರಿ ವತಿಯಿಂದ "ಜಾಕ್‌ಸನ್ ಕೋ-ಆಪರೇಟಿವ್ ಕ್ರೆಡಿಟ್ ಸೋಸೈಟಿ ಆಫ್ ದಿ ಎಂಪ್ಲಾಯೀಸ್ ಆಫ್ ದಿ ವೆಸ್ಟರ್ನ್ ರೈಲ್ವೆ ಲಿ.," ಮುಂಬೈ, ಇವರ ನಿರ್ದೇಶಕರುಗಳಿಗಾಗಿ ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಶ್ರೀ ವಿ.ಜೆ.ಕಾರಕೂನ, ತರಬೇತಿ ಅಧಿಕಾರಿ, ಮುಖ್ಯ ಅಥಿತಿ ಗಣ್ಯರನ್ನು ಸ್ವಾಗತ ಮಾಡುವ ಮೂಲಕ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದರು. ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ನಿರ್ದೇಶಕರಾದ (ನಿ) ಡಾ. ಎಸ್.ಎ. ಸಿದ್ಧಾಂತಿಯವರು ತರಬೇತಿ ಉದ್ದೇಶವನ್ನು ವಿವರಿಸಿದರು.

ಈ ಕಾರ್ಯಕ್ರಮದಲ್ಲಿ ಸಹಕಾರ ಕ್ಷೇತ್ರದ ಬಗ್ಗೆ ಡಾ.ಎಸ್.ಎ. ಸಿದ್ಧಾಂತಿಯವರು ತಿಳಿಸಿಕೊಟ್ಟರು. ಸ್ವಾಯತ್ತತೆ, ವೃತ್ತಿಪರತೆ, ಪಾರದರ್ಶಕತೆಯ ಬಗ್ಗೆ ಹಲವು ಉದಾಹರಣೆಗಳ ಮೂಲಕ ಶ್ರೀ ವೈ.ವಿ.ಗುಂಡೂರಾವ್, ಸಹಪ್ರಧಾನ ವ್ಯವಸ್ಥಾಪಕರು (ನಿ), ನಬಾರ್ಡ್ ಇವರು ತಿಳಿಸಿಕೊಟ್ಟರು. ಮಾಹಿತಿ ತಂತ್ರಜ್ಞಾನ ಅಳವಡಿಕೆಯ ಬಗ್ಗೆ ಶ್ರೀ ಜಿ.ಎಸ್. ರವೀಂದ್ರ, ಕಾರ್ಪೋರೇಟ್ ಟ್ರೇನರ್ ಇವರು ತಿಳಿಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಜಾಕ್‌ಸನ್ ಕೋ-ಆಪರೇಟಿವ್ ಕ್ರೆಡಿಟ್ ಸೋಸೈಟಿ ಆಫ್ ದಿ ಎಂಪ್ಲಾಯೀಸ್ ಆಫ್ ದಿ ವೆಸ್ಟರ್ನ್ ರೈಲ್ವೆ ಲಿ. ಸಹಕಾರಿಯ 21 ನಿರ್ದೇಶಕರು ಭಾಗವಹಿಸಿ ಪ್ರಯೋಜನ ಪಡೆದರು ತರಬೇತಿ ಕಾರ್ಯಕ್ರಮ ಅತ್ಯಂತ ಉತ್ತಮವಾಗಿತ್ತೆಂದು ಶಿಭಿರಾರ್ಥಿಗಳು ಮೆಚ್ಚುಗೆ ವ್ಯಕ್ತಪಡಿಸಿದರು.

# ತೆಲಂಗಾಣ ರಾಜ್ಯದ ಸಹಕಾರಿಗಳು ಕರ್ನಾಟಕದಲ್ಲಿ ಸೌಹಾರ್ದ ಸಹಕಾರ ಕ್ಷೇತ್ರದ ಅಧ್ಯಯನಕ್ಕಾಗಿ ಭೇಟಿ




**ಬೆಂಗಳೂರು:** ದಿನಾಂಕ 27.01.2020 ಮತ್ತು 28.01.2020 ರಂದು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಅಧ್ಯಯನಕ್ಕಾಗಿ ತೆಲಂಗಾಣ ಮೂಲಕ ಸಹಕಾರಿಗಳಿಗೆ ಎರಡು ದಿನದ ತರಬೇತಿಯನ್ನು ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರಿಂದ ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸಂಯುಕ್ತ ಸಹಕಾರಿಯ ಚಟುವಟಿಕೆಗಳ ಬಗ್ಗೆ ಉಪನ್ಯಾಸ ನೀಡಿದರು.

ನಂತರ ಆರ್.ಐ.ಸಿ.ಎಂ ನ ಉಪನಿರ್ದೇಶಕರಾದ ಶ್ರೀ ರವಿಚಂದ್ರನ ರವರು ಅಧಿಪ್ರೇರಣೆ ಮತ್ತು ಸಕಾರಾತ್ಮಕ ಚಿಂತನೆ ಮತ್ತು ನಿರ್ದೇಶಕರ ಕರ್ತವ್ಯ ಹಾಗೂ ಜವಾಬ್ದಾರಿಗಳ ಬಗ್ಗೆ ಉಪನ್ಯಾಸ ನೀಡಿದರು.

ನಂತರದಲ್ಲಿ ದಿ ಪಾವಗಡ ಮಲ್ಟಿಪರ್ಪಸ್ ಕೋ–ಆಪರೇಟಿವ್ ಸೊಸೈಟಿಗೆ ಭೇಟಿ ನೀಡಿದಾಗ ಸಂಯುಕ್ತ ಸಹಕಾರಿ ಅಧ್ಯಕ್ಷ ಹಾಗೂ ದಿ ಪಾವಗಡ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಮತ್ತು ಸಹಕಾರಿಯ ಮಾರ್ಗದರ್ಶಿ ಶ್ರೀ ದಯಾಕರ ರೆಡ್ಡಿ ಯವರುಗಳು ಸಹಕಾರಿಯ ಬಗ್ಗೆ ಮಾಹಿತಿ ನೀಡಿದರು. ನಂತರ ಸಂಯುಕ್ತ ಸಹಕಾರಿಯ ಕಛೇರಿಗೆ ಭೇಟಿ ನಂತರ ಉದಯ ಸೌಹಾರ್ದ ಸಹಕಾರಿಯ ಕಾರ್ಯಚಟುವಟಿಕೆಗಳನ್ನು ಅಧ್ಯಯನ ಮಾಡಿದ ನಂತರ ಶಿರಸಿಗೆ ತೆರಳಿ ಅಲ್ಲಿ ಸೂಡ್‌ವೇಸ್ ಸೌಹಾರ್ದ ಸಹಕಾರಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ತೋಟಗಾರ್ಸ್ ಸಹಕಾರಿ ಸಂಘ ಮತ್ತು ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಿದರು. ಸೌಹಾರ್ದ ಸಹಕಾರಿ ಕಾಯ್ದೆ ಅನುಕರಣೀಯವೆಂದು ತೆಲಂಗಾಣ ಸಹಕಾರಿಗಳ ಅಭಿಪ್ರಾಯ.



ತೆಲಂಗಾಣ ಸಹಕಾರಿಗಳು ದಿ ಪಾವಗಡ ಸೌಹಾರ್ದ ಸಹಕಾರಿಗೆ ಭೇಟಿ




ತೆಲಂಗಾಣ ಸಹಕಾರಿಗಳು ಉದಯ ಸೌಹಾರ್ದ ಸಹಕಾರಿಗೆ ಭೇಟಿ



ತೆಲಂಗಾಣ ಸಹಕಾರಿಗಳು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ




ತೆಲಂಗಾಣ ಸಹಕಾರಿಗಳು ಸ್ಟೂಡವೆಸ್ ಮಹಿಳಾ ಸೌಹಾರ್ದ ಸಹಕಾರಿಗೆ ಭೇಟಿ



ತೆಲಂಗಾಣ ಸಹಕಾರಿಗಳು ದಿ ತೋಟಗಾರ್ಸ ಸೇಲ್ಸ್ ಕೋ-ಆಪರೇಟಿವ್ ಸಹಕಾರಿಗೆ ಭೇಟಿ



ತೆಲಂಗಾಣ ಸಹಕಾರಿಗಳು ಉತ್ತರ ಕನ್ನಡ ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್‌ಗೆ ಭೇಟಿ

# "ಆಡಳಿತ ಪರಿಣಿತಿ" ತರಬೇತಿ ಕಾರ್ಯಕ್ರಮ



**ರಾಯಚೂರು:** ದಿನಾಂಕ: 28.01.2020 ಮತ್ತು 29.01.2020 ರಂದು ರಾಯಚೂರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರಿಗಾಗಿ ಮತ್ತು ಉಪಾಧ್ಯಕ್ಷರಿಗಾಗಿ 2 ದಿನದ "ಆಡಳಿತ ಪರಿಣಿತಿ" ತರಬೇತಿಯನ್ನು ಮುಖ್ಯ ಕೃಷಿ ಸಂಶೋಧನಾ ಕೇಂದ್ರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರುನಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಷ.ಬ್ರ. ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಸ್ವಾಮಿಗಳು, ಕಲ್ಮಾಠ ಮಾನವಿ ಇವರು ವಹಿಸಿದ್ದರು. ಉದ್ಘಾಟನೆಯನ್ನು ಮಾಜಿ ಸಂಸದರು ಹಾಗೂ ರಾಯಚೂರ ಒಕ್ಕೂಟದ ಅಧ್ಯಕ್ಷರಾದ ಶ್ರೀ, ಕೆ. ವಿರೂಪಾಕ್ಷಪ್ಪ ಇವರು ನೇರವೇರಿಸಿದರು, ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಆರ್. ತಿಮ್ಮಯ್ಯ ಶೆಟ್ಟಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಹಂಪನಗೌಡ ಬಾದರ್ಲಿ, ಮಾಜಿ ಶಾಸಕರು ಮತ್ತು ಅಧ್ಯಕ್ಷರು, ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು, ಶ್ರೀ ರಾಜಶೇಖರ ಬಿ. ವೃತ್ತಿಪರ ನಿರ್ದೇಶಕರು, ಸಂಯುಕ್ತ ಸಹಕಾರಿ ಹಾಗೂ ಅಧ್ಯಕ್ಷರು, ಸಿಂಧು ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು, ಶ್ರೀ ವಿಶ್ವನಾಥ ಪಾಟೀಲ ತೋರಣದಿನ್ನಿ, ನಿರ್ದೇಶಕರು, ರಾಯಚೂರ ಕೇಂದ್ರ ಸಹಕಾರ ಬ್ಯಾಂಕ ನಿ., ರಾಯಚೂರ, ಡಾ. ಡಿ.ಎಂ. ಚಂದರಾಗಿ, ಡಿನ್, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ತಾಂತ್ರಿಕ ಕಾಲೇಜ ರಾಯಚೂರ. ಇವರುಗಳು ಆಗಮಿಸಿದರು. ವೇದಿಕೆಯ ಮೇಲೆ ಪ್ರಾಂತೀಯ ವ್ಯವಸ್ಥಾಪಕಾದ ಶ್ರೀ ರಾಜಶೇಖರ ಬಿ ಉಪಸ್ಥಿತರಿದ್ದರು.

ಈ ಕಾರ್ಯಗಾರದಲ್ಲಿ 47 ಸೌಹಾರ್ದ ಸಹಕಾರಿಗಳಿಂದ 62 ಪ್ರತಿನಿಧಿಗಳು ಭಾಗವಹಿಸಿದರು. ಕಾರ್ಯಗಾರದ ಸಂಪನ್ಮೂಲ ವ್ಯಕ್ತಿಗಳು ಶ್ರೀ ಹೆಚ್. ಎಸ್ ನಾಗರಾಜಯ್ಯ, ನಿವೃತ್ತ ಅಪರ ನಿಬಂಧಕರು ಇವರು ಸೌಹಾರ್ದ ಸಹಕಾರಿ ಕಾಯ್ದೆಯ ಆಶಯ ಮತ್ತು ಸಂಯುಕ್ತ ಸಹಕಾರಿಯ ವಿಷಯದ ಕುರಿತು ಉಪನ್ಯಾಸ ನೀಡಿದರು. ಶ್ರೀ ಐ ಎಸ್ ಗಿರಡ್ಡಿ ಅಪರ ನಿಬಂಧಕರು ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ರಾಯಚೂರು ಇವರು ಆಡಳಿತ ಮಂಡಳಿಯ ಜವಾಬ್ದಾರಿ ಮತ್ತು ಕರ್ತವ್ಯಗಳು ಕುರಿತು ಉಪನ್ಯಾಸ ನೀಡಿದರು.



**ಬಳ್ಳಾರಿ:** ದಿನಾಂಕ: 01.02.2020 ಮತ್ತು 02.02.2020 ರಂದು ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗಾಗಿ 2 ದಿನದ "ಆಡಳಿತ ಪರಿಣಿತಿ" ತರಬೇತಿಯನ್ನು ಮೈರಾಡ್ ತರಬೇತಿ ಕೇಂದ್ರ ಹೊಂಗಿರಣ, ಡಣಾಪುರ, ಹೊಸಪೇಟೆಯಲ್ಲಿ ಹಮ್ಮಿಕೊಳ್ಳಲಾಗಿತ್ತು, ಈ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ಮತ್ತು ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವಿಶ್ವನಾಥ್ ಚ. ಹಿರೇಮಠ ಇವರು ನೆರವೇರಿಸಿದರು, ಮುಖ್ಯ ಅತಿಥಿಗಳಾಗಿ ಶ್ರೀ ಎಲ್.ಎಸ್. ಆನಂದ ನಿರ್ದೇಶಕರು, ಬಿಡಿಸಿಸಿ ಬ್ಯಾಂಕ್, ಮತ್ತು ಉಪಾಧ್ಯಕ್ಷರು ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹೊಸಪೇಟೆ, ಶ್ರೀ ಬಿ.ಜೆ.ಕುಲಕರ್ಣಿ, ಪಿ.ಕೆ.ಜಿ.ಬಿ ಬ್ಯಾಂಕಿನ ಮಾಜಿ ವ್ಯವಸ್ಥಾಪಕರು, ಶ್ರೀ ವೈ.ವಿ.ಗುಂಡುರಾವ್ ರವರು ನಿವೃತ್ತ ನಬಾರ್ಡ್ ಅಧಿಕಾರಿಗಳು, ಪ್ರಾಂತೀಯ ವ್ಯವಸ್ಥಾಪಕಾದ ಶ್ರೀ ರಾಜಶೇಖರ ಹೆಚ್ ಉಪಸ್ಥಿತರಿದ್ದರು. ಈ ಕಾರ್ಯಗಾರದಲ್ಲಿ 24 ಸೌಹಾರ್ದ ಸಹಕಾರಿಗಳಿಂದ 32 ಪ್ರತಿನಿಧಿಗಳು ಭಾಗವಹಿಸಿದರು. ಕಾರ್ಯಗಾರದ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ವೈ.ವಿ.ಗುಂಡುರಾವ್ ನಿವೃತ್ತ ನಬಾರ್ಡ್ ಅಧಿಕಾರಿಗಳು ಇವರು ಸೌಹಾರ್ದ ಸಹಕಾರಿ ದೃಷ್ಟಿಕೋನ, ಸಂಪನ್ಮೂಲಗಳ ಕ್ರೂಡೀಕರಣ ಮತ್ತು ಸದ್ಬಳಕೆ ವಿಷಯದ ಕುರಿತು ಉಪನ್ಯಾಸ ನೀಡಿದರು

# ಕ್ಲಸ್ಟರ್ ತರಬೇತಿ ಕಾರ್ಯಕ್ರಮ

**ರಾಯಚೂರು:** ದಿನಾಂಕ: 25.01.2020ರಂದು ರಾಯಚೂರು ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಮತ್ತು ಕ್ಯಾಶಿಯರ್‌ಗಾಗಿ "ಪತ್ರ ವ್ಯವಹಾರ ಮತ್ತು ವೋಚರಗಳ ನಿರ್ವಹಣೆ" ಕುರಿತು ಕ್ಲಸ್ಟರ್ ತರಬೇತಿಯನ್ನು ವಿಕಾಸ ಎನ್.ಜಿ.ಓ ರಾಯಚೂರುನಲ್ಲಿ ಹಮ್ಮಿಕೊಳ್ಳಲಾಗಿತ್ತು ಈ ತರಬೇತಿಯಲ್ಲಿ ಒಟ್ಟು 28 ಸೌಹಾರ್ದ ಸಹಕಾರಿಗಳಿಂದ 56 ಪ್ರತಿನಿಧಿಗಳು ಭಾಗವಹಿಸಿರುತ್ತಾರೆ.

# "ಆದಾಯ ತೆರಿಗ ವಿಷಯಗಳ ಪಾವತಿಗೆ ಸಂಬಂಧಿಸಿದಂತೆ ಸಹಕಾರಿಗಳ ಸಮಾಲೋಚನಾ ಸಭೆ"






**ಶಿವಮೊಗ್ಗ:** ದಿನಾಂಕ 06.01.2020 ರಂದು ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ವಿಪ್ರ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಇಲ್ಲಿ ಆದಾಯ ತೆರಿಗೆ ಇಲಾಖೆಯಿಂದ ಉಂಟಾಗುತ್ತಿರುವ ಸಮಸ್ಯೆಗಳು ಮತ್ತು ಮುಂದಿನ ಕ್ರಮದ ಕುರಿತು ಸಮಾಲೋಚನಾ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಪ್ರಸನ್ನಕುಮಾರ್ ಎ, ಆರ್ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಅಶ್ವಥ್, ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟ, ಶಿವಮೊಗ್ಗ ಇವರು ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಮಧುಕರ ಹೆಗಡೆ ಹಾಗೂ ಶ್ರೀ ರವೀಂದ್ರನಾಥ್, ಸನ್ನದು ಲೆಕ್ಕಪರಿಶೋಧಕರು, ಶಿವಮೊಗ್ಗ ಇವರು ಭಾಗವಹಿಸಿ ಅಗತ್ಯ ಮಾಹಿತಿ ನೀಡಿದರು. ಸಭೆಯಲ್ಲಿ 30 ಸೌಹಾರ್ದ ಸಹಕಾರಿಗಳಿಂದ 45 ಜನ ಭಾಗವಹಿಸಿದ್ದರು.

**ಬೆಂಗಳೂರು:** ದಿನಾಂಕ 18.01.2020 ರಂದು ಬೆಂಗಳೂರು ಪ್ರಾಂತದ ಸೌಹಾರ್ದ ಸಹಕಾರಿಗಳಿಗಾಗಿ ಆದಾಯ ತೆರಿಗೆ ಸಮಸ್ಯೆಗಳ ಕುರಿತು ಸಮಾಲೋಚನಾ ಸಭೆಯನ್ನು ಉದಯ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡುರಾವ್, ವಕೀಲರಾದ ಶ್ರೀ ಮಲ್ಲಾರೆಡ್ಡಿ, ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಾಲಸುಬ್ರಮಣ್ಯಂ, ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ರವರು ಉಪಸ್ಥಿತರಿದ್ದರು. ಸದರಿ ಕಾರ್ಯಕ್ರಮದಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಂದ 115 ಪ್ರತಿನಿಧಿಗಳು ಭಾಗವಹಿಸಿದ್ದರು.

# "ಆರ್ಥಿಕ ತಃಖ್ತೆಗಳ ವಿಶ್ಲೇಷಣೆ, ಲೆಕ್ಕಪರಿಶೋಧನೆ ವರದಿ ಸಿದ್ದತೆ ಹಾಗೂ ಪ್ರಕ್ರಿಯೆ" ಕುರಿತು ತರಬೇತಿ ಕಾರ್ಯಕ್ರಮ



**ಮಂಡ್ಯ:** ದಿನಾಂಕ 25.01.2020ರ ಶನಿವಾರ ಮಂಡ್ಯ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗೆ "ಆರ್ಥಿಕ ತಃಖ್ತೆಗಳ ವಿಶ್ಲೇಷಣೆ, ಲೆಕ್ಕಪರಿಶೋಧನೆ ವರದಿ ಸಿದ್ದತೆ ಹಾಗೂ ಪ್ರಕ್ರಿಯೆ" ವಿಷಯದ ಕುರಿತು ತರಬೇತಿ ಕಾರ್ಯಕ್ರಮದ ಉದ್ಘಾಟನೆ ಹಾಗೂ ಅಧ್ಯಕ್ಷತೆಯನ್ನು ಶ್ರೀ ಎ.ಇ. ಲೂಯಿಸ್ ರವರು ಮಾನ್ಯ ಉಪಾಧ್ಯಕ್ಷರು, ಮಂಡ್ಯ ವರ್ತಕರ ಸೌಹಾರ್ದ ಸಹಕಾರಿ ನಿ., ಮಂಡ್ಯ ಇವರು ನೇರವೇರಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ಎನ್. ಜಿ ನಾಗರಾಜ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶ್ರೀಮತಿ ಸುನೀತಾ ಇವರು ನಿರೂಪಿಸಿದರು. ಸ್ವಾಗತವನ್ನು ಶ್ರೀ ಮಧು ರವರು ಮಾಡಿದರು. ಪ್ರಾಸ್ತಾವಿಕ ನುಡಿಯನ್ನು ಶ್ರೀ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು, ಮಂಡ್ಯ & ಚಾಮರಾಜನಗರ ಇವರು ನೇರವೇರಿಸಿದರು.

ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 11 ಸೌಹಾರ್ದ ಸಹಕಾರಿಗಳಿಂದ 17 ಜನ ಸಿಬ್ಬಂದಿಗಳು ಹಾಗೂ 03 ಉದ್ದೇಶಿತ ಸೌಹಾರ್ದ ಸಹಕಾರಿಗಳಿಂದ 03 ಜನ ಪ್ರವರ್ತಕರು ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಎನ್.ಜಿ ನಾಗರಾಜ, ಮುಖ್ಯ ಕಾರ್ಯನಿರ್ವಾಹಕರು, ವಿನಾಯಕ ಸೌಹಾರ್ದ ಸಹಕಾರಿ ನಿ., ಚನ್ನರಾಯಪಟ್ಟಣ ಇವರು ಉಪನ್ಯಾಸ ನೀಡಿದರು. ಶ್ರೀ ಬಬ್ರುವಾಹನ ಇವರು ವಂದಿಸಿದರು.

# ಸಂಭ್ರಮದ ಗಣರಾಜ್ಯೋತ್ಸವ ಆಚರಣೆ ವರದಿಗಳು

## ಸಂಯುಕ್ತ ಸಹಕಾರಿ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳಲ್ಲಿ 71ನೇ ಗಣರಾಜ್ಯೋತ್ಸವ ದಿನಾಚರಣೆ.

71ನೇ ಗಣರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ಪ್ರಾಂತೀಯ ಕಛೇರಿ ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ ಮತ್ತು ಬೆಳಗಾವಿ ಪ್ರಾಂತೀಯ ಕಛೇರಿ, ಕಲಬುರಗಿ ಪ್ರಾಂತೀಯ ಕಛೇರಿ, ಮೈಸೂರು ಪ್ರಾಂತೀಯ ಕಛೇರಿ ಹಾಗೂ ಜಿಲ್ಲಾ ಸಂಪರ್ಕ ಕಛೇರಿಗಳಲ್ಲಿ ಆಚರಿಸಲಾಯಿತು.



ಕೇಂದ್ರ ಕಛೇರಿ



ಕಲಬುರಗಿ ಪ್ರಾಂತೀಯ ಕಛೇರಿ




ಮೈಸೂರು ಪ್ರಾಂತೀಯ ಕಛೇರಿ



ಬೆಳಗಾವಿ ಪ್ರಾಂತೀಯ ಕಛೇರಿ






**ಬೀದರ :** ದಿನಾಂಕ 26.01.2020ರಂದು ಬೀದರ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಸಹಕಾರಿಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ನೇರವೇರಿಸಿದರು. ಈ ಸಂದರ್ಭದಲ್ಲಿ ಬೀದರ ಜಿಲ್ಲೆ ಸೌಹಾರ್ದ ಸಹಕಾರಿಗಳು, ಜಿಲ್ಲಾ ಸಂಯೋಜಕರಾದ ಶ್ರೀ ವೀರಶೆಟ್ಟಿ ಉಪಸ್ಥಿತರಿದ್ದರು.

**ಸಸಾಲಟ್ಟಿ :** ಶ್ರೀ ವೀರರುದ್ರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿಯಮಿತ ಸಸಾಲಟ್ಟಿ ಸಹಕಾರಿಯಲ್ಲಿ 71 ನೇ ಗಣರಾಜ್ಯೋತ್ಸವ ದಿನಾಚರಣೆಯ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಪರಪ್ಪ ಚ ಮದನಮಟ್ಟಿ ಇವರು ನೇರವೇರಿಸಿದರು ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು

# ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ 71ನೇ ಗಣರಾಜ್ಯೋತ್ಸವ ದಿನಾಚರಣೆ



**ಚಿಕ್ಕೋಡಿ:** ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿಯಲ್ಲಿ 71ನೇ ಗಣರಾಜ್ಯೋತ್ಸವದ ಧ್ವಜಾರೋರಣವನ್ನು ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಷಡಕ್ಷರಿ ಬಿ ಮೂಗೇರಿ ಇವರು ನೇರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಹಾಗೂ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಹಾಗೂ ಸಹಕಾರಿ ನಿರ್ದೇಶಕರಾದ ಸಂಜಯ ಗಿಡವೀರ, ರಮೇಶ ಕುಡತರಕರ, ಯರ್ರಿಸ್ವಾಮಿಗೌಡಾ ಇಟಗೌನಿ, ಲೋಕಪ್ಪಾ ದುಂಬಾಳಿ, ಹೇಮಂತ ಹಂಪಣ್ಣವರ, ಪ್ರವೀಣ ಕಾಂಬಳೆ, ಶ್ರೀಧರ ದಿಕ್ಷೀತ, ರಾಜಕುಮಾರ ಹಿರೇಮಠ, ಚಂದ್ರಕಾಂತ ಬುರಡ, ಮನೋಜಕುಮಾರ ಸಮ್ಮತಶೆಟ್ಟಿ, ಸಂತೋಷ್ ವಾಲಿ ಹಾಗೂ ಮುಖ್ಯ ಕಾರ್ಯನಿರ್ವಾಹಕರಾದ ಎಮ್ ಬಿ. ಬಡಿಗೇರ ಹಾಗೂ ಸಹಕಾರಿಯ ಸಲಹಾ ಸಮಿತಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಬಂಕಾಪೂರ:** ಶ್ರೀ ಪುಟ್ಟರಾಜ ಸೌಹಾರ್ದ ಸಹಕಾರಿ ನಿಯಮಿತ ಬಂಕಾಪೂರ ಸಹಕಾರಿಯು 71ನೇ ಗಣರಾಜ್ಯೋತ್ಸವದ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಹನುಮಂತಪ್ಪ. ಯು.ವ್ಹಿ ಇವರು ನೇರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು ಹಾಗೂ ಸಹಕಾರಿಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




**ಮಾಲೂರು:** ಶ್ರೀ ವಾಸವಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಮಾಲೂರು ಸದರಿ ಸಹಕಾರಿ ವತಿಯಿಂದ 71ನೇ ಗಣರಾಜ್ಯೋತ್ಸವ ದಿನಾಚರಣೆ ಆಚರಣೆ.



**ಚಿತ್ರದುರ್ಗ :** ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನ ಜೆ.ಸಿ.ಆರ್ ಬಡಾವಣೆ ಶಾಖೆಯಲ್ಲಿ 71ನೇ ಗಣರಾಜ್ಯೋತ್ಸವ ದಿನಾಚರಣೆ ಪ್ರಯುಕ್ತ ಧ್ವಜಾರೋಹಣವನ್ನು ಬ್ಯಾಂಕಿನ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್ ಆರ್ ಲಕ್ಷ್ಮೀಕಾಂತ ರೆಡ್ಡಿಯವರು ನೇರವೇರಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ನಿರ್ದೇಶಕರು, ಸಿಬ್ಬಂದಿ ವರ್ಗದವರು ಹಾಗೂ ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಉಪಸ್ಥಿತರಿದ್ದರು.



**ಬೈಲಹೊಂಗಲ:** ಕಿತ್ತೂರ ರಾಣಿ ಚನ್ನಮ್ಮ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ., ಬೈಲಹೊಂಗಲ ಮುಖ್ಯ ಕಚೇರಿಯಲ್ಲಿ 71ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಧ್ವಜಾರೋಹಣವನ್ನು ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಮಲ್ಲನಾಯ್ಕ ಪಾಟೀಲ ನೆರವೇರಿಸಿದರು. ಸಮಾರಂಭದಲ್ಲಿ ನಿರ್ದೇಶಕರಾದ ಶ್ರೀ ಸುನೀಲ ಪಾಟೀಲ, ಶ್ರೀ ಶಿವಪುತ್ರಪ್ಪ ತಟವಾಟಿ, ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಮಲ್ಲಿಕಾರ್ಜುನ ಸಾಲಿಮಠ ಹಾಗೂ ಸರ್ವ ಸಿಬ್ಬಂದಿಯವರು ಉಪಸ್ಥಿತರಿದ್ದರು.



**ಮಂಗಳೂರು:** ದಿನಾಂಕ 26.01.2020 ರಂದು ವಿಠಲ ಜಿ.ಎಸ್.ಬಿ ಸೌಹಾರ್ದ ಸಹಕಾರಿಯ ಉದ್ಘಾಟನೆಯನ್ನು ಕ್ಯಾಂಪ್ಕೋ ಸಹಕಾರಿಯ ಹಾಗೂ ಸರಸ್ವತಿ ಸೌಹಾರ್ದ ಸಹಕರಿಯ ಅಧ್ಯಕ್ಷರಾದ ಶ್ರೀ ಎಸ್. ಆರ್. ಸತೀಶ್ಚಂದ್ರ ಇವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಉಪಸ್ಥಿತರಿದ್ದರು.

# ಸೌಹಾರ್ದ ಸಹಕಾರಿಗಳು ಸಹಕಾರ ಸಂಘಗಳೆಂದು ಪರಿಗಣಿಸಿ ಅವರಿಗೆ ಆದಾಯ ತೆರಿಗೆ 80ಪಿ(2) ಅನ್ವಯ ವಿನಾಯಿತಿಗೆ ಅರ್ಹರೆಂದು ಹೈಕೋರ್ಟ್ ಮಹತ್ವದ ಆದೇಶದ ಹಿನ್ನೆಲೆಯಲ್ಲಿ ರಾಜ್ಯಾದಾದ್ಯಂತ ಪತ್ರಿಕಾ ಗೋಷ್ಠಿ

## ರಾಜ್ಯದ ಹೈಕೋರ್ಟ್ ತೀರ್ಪಿಗೆ ಸಹಕಾರಿಗಳ ಸ್ವಾಗತ - ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ




**ಬೆಂಗಳೂರು:** ಸೌಹಾರ್ದ ಸಹಕಾರಿಗಳು ಕೂಡ ಸಹಕಾರಿ ಸಂಘಗಳೆಂದು ಕರ್ನಾಟಕ ರಾಜ್ಯದ ಮಾನ್ಯ ಉಚ್ಚ ನ್ಯಾಯಾಲಯ ಐತಿಹಾಸಿಕ ತೀರ್ಪನ್ನು ನೀಡಿರುವ ಹಿನ್ನೆಲೆಯಲ್ಲಿ ದಿನಾಂಕ 23.01.2020 ರಂದು ಬೆಂಗಳೂರಿನಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿ ರವರ ನೇತೃತ್ವದಲ್ಲಿ ಪತ್ರಿಕಾ ಗೋಷ್ಠಿ ನಡೆಯಿತು.

ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ ಎಸ್ ಗುಂಡುರಾವ್, ಸೌಹಾರ್ದ ಸಹಕಾರಿ ಪ್ರತಿನಿಧಿಗಳಾದ ಶ್ರೀ ಶ್ರೀಧರ, ಶ್ರೀ ಮುನಿರೆಡ್ಡಿ, ಶ್ರೀ ಶಂಕರ ಮೂರ್ತಿ, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ಉಪಸ್ಥಿತರಿದ್ದರು.

## ನ್ಯಾಯಾಲಯದಿಂದ ಐತಿಹಾಸಿಕ ತೀರ್ಪು, ಆದಾಯ ತೆರಿಗೆ ಹೊರೆಯಿಂದ ಸಹಕಾರ ಕ್ಷೇತ್ರ ಪಾರು - ಶ್ರೀ ಜಗದೀಶ ಕವಟಗಿಮಠ



**ಬೆಳಗಾವಿ:** ದಿನಾಂಕ 20.01.2020 ರಂದು ಚಿಕ್ಕೋಡಿಯ ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿಯಲ್ಲಿ ಜರುಗಿದ ಪತ್ರಿಕಾ ಗೋಷ್ಠಿಯಲ್ಲಿ ಶ್ರೀ ಜಗದೀಶ ಕವಟಗಿಮಠ, ಮಾನ್ಯ ಉಪಾಧ್ಯಕ್ಷರು ಸಂಯುಕ್ತ ಸಹಕಾರಿ, ಬೆಂಗಳೂರು ಇವರು ಮಾತನಾಡುತ್ತಾ ಸಹಕಾರ ಕೇತ್ರ ಎದುರಿಸುತ್ತಿರುವ ಆದಾಯ ತೆರಿಗೆ ತೊಂದರೆಗಳ ನಿವಾರಣೆಯಲ್ಲಿ ಸಂಯುಕ್ತ ಸಹಕಾರಿಯ ನಿರಂತರ ಪ್ರಯತ್ನದ ಫಲವಾಗಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಆದಾಯ ತೆರಿಗೆ ವಿಷಯದಲ್ಲಿ ಯಶಸ್ಸು ಸಿಕ್ಕಿದೆ. ಸೌಹಾರ್ದ ಸಹಕಾರಿಗಳು ಕೂಡ ಸಹಕಾರಿ ಸಂಘಗಳೆಂದು ಕರ್ನಾಟಕ ರಾಜ್ಯದ ಹೈಕೋರ್ಟ ಐತಿಹಾಸಿಕ ತೀರ್ಪು ನೀಡಿದೆ ಎಂದರು. ರಾಜ್ಯದ ಸ್ವಾಯತ್ತ ಸಹಕಾರ ಕಾಯ್ದೆಯಾದ ಸೌಹಾರ್ದ ಸಹಕಾರಿ ಅಧಿನಿಯಮದಡಿ ನೋಂದಾಯಿತ ಸೌಹಾರ್ದ ಸಹಕಾರಿಗಳು ಸಹಕಾರಿ ಸಂಘಗಳಲ್ಲ ಎಂದು ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಪರಿವಾಚಿಸಿ ತೆರಿಗೆ ಕಟ್ಟುವಂತೆ ನೋಟಿಸು ಹಾಗೂ ಆದೇಶಗಳನ್ನು ನೀಡುತ್ತಿರುವುದು ಸೌಹಾರ್ದ ಸಹಕಾರಿಗಳಿಗೆ ಆತಂಕವನ್ನುಂಟು ಮಾಡಿತ್ತು. ಈ ಸಮಸ್ಯೆ ಪರಿಹರಿಸುವಲ್ಲಿ ಸೌಹಾರ್ದ ಸಹಕಾರ ಕ್ಷೇತ್ರದ ಮಾತೃ ಸಂಸ್ಥೆಯಾದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಕಳೆದೆರಡು ವರ್ಷಗಳಿಂದ ನಡೆಸಿದ ನಿರಂತರ ಪ್ರಯತ್ನದಿಂದ ಸಮಸ್ಯೆಗೆ ಪರಿಹಾರ ಸಿಕ್ಕಿದೆ ಎಂದರು.

**ಚಿಕ್ಕಬಳ್ಳಾಪುರ:** ರಾಜ್ಯದ ಸೌಹಾರ್ದ ಸಹಕಾರಿಗಳು ಆದಾಯ ತೆರಿಗೆ ಕಲಂ 80ಪಿ(2) ರಡಿಯಲ್ಲಿ ತೆರಿಗೆ ವಿನಾಯಿತಿಗೆ ಅರ್ಹವೆಂದು ರಾಜ್ಯ ಉಚ್ಚ ನ್ಯಾಯಾಲಯ ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ದಿನಾಂಕ 02.02.2020 ರಂದು ಚಿಕ್ಕಬಳ್ಳಾಪುರ ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾ ಗೋಷ್ಠಿಯನ್ನು ನಡೆಸಿದರು.

ಈ ಸಂದರ್ಭದಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮುಖ್ಯ ಪ್ರವರ್ತಕರಾದ ಶ್ರೀಮತಿ ಟಿ.ಎನ್.ಶೈಲಜಾ, ವಾಸವಿ ವರ್ತಕರ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ತ್ಯಾಗರಾಜು, ಒಕ್ಕೂಟದ ಪ್ರವರ್ತಕರಾದ ಶ್ರೀ ಅಮರ್ ಮತ್ತು ಸಮೃದ್ಧಿ ಮಹಿಳಾ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಗಂಗಲಕ್ಷ್ಮಮ್ಮ ಹಾಗೂ ಶಿರಡಿ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯದರ್ಶಿ ಶ್ರೀ ವೆಂಕಟರವಣಪ್ಪ ಇವರು ಉಪಸ್ಥಿತರಿದ್ದರು.

## ಆದಾಯ ತೆರಿಗೆ ವಿನಾಯತಿಗೆ ಅರ್ಹ - ಶ್ರೀ ಹೆಚ್. ವಿ ರಾಜೀವ್




**ಮೈಸೂರು:** ರಾಜ್ಯದ ಸೌಹಾರ್ದ ಸಹಕಾರಿಗಳು ಆದಾಯ ತೆರಿಗೆ ಕಲಂ. 80ಪಿ(2)ರಡಿಯಲ್ಲಿ ತೆರಿಗೆ ವಿನಾಯಿತಿಗೆ ಅರ್ಹವೆಂದು ರಾಜ್ಯ ಉಚ್ಚ ನ್ಯಾಯಾಲಯ ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ದಿನಾಂಕ 22-01-2020 ರಂದು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾ ಗೋಷ್ಠಿಯನ್ನು ಆಯೋಜನೆ ಮಾಡಲಾಗಿತ್ತು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್.ವಿ ರಾಜೀವ್‌ರವರು, ಶ್ರೀ ವಾಗ್ದೇವಿ ಸೌಹಾರ್ದ ಪತ್ತಿನ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನವೀನ್‌ರವರು, ಶ್ರೀ ಕೃಷ್ಣ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಾರಾಯಣ ರಾವ್‌ರವರು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಸೌಹಾರ್ದ ಸಹಕಾರಿ ಸಂಸ್ಥೆಗೆ ತೆರಿಗೆ ವಿನಾಯಿತಿ - ಶ್ರೀ ಗುರುನಾಥ ಜ್ಯಾಂತಿಕರ




**ಬೀದರ:** ದಿನಾಂಕ 23.01.2020 ರಂದು ಬೀದರ ನಗರದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಇವರು ಸೌಹಾರ್ದ ಸಹಕಾರಿಗಳಿಗೆ ನೀಡಿರುವ ಆದಾಯ ತೆರಿಗೆಯ ಕುರಿತು ಉಚ್ಚ ನ್ಯಾಯಾಲಯ ತೀರ್ಪಿನ ಕುರಿತು ಪತ್ರಿಕಾ ಗೋಷ್ಠಿ ನಡೆಸಿ ಪತ್ರಕರ್ತರಿಗೆ ಮಾಹಿತಿ ನೀಡಿದರು. ಈ ಪತ್ರಿಕಾಗೋಷ್ಠಿಯಲ್ಲಿ ಕಾನೂನು ಅಧಿಕಾರಿ ಶ್ರೀ ಸೂರ್ಯಕಾಂತ ರಾಕಲೇ, ಬೀದರ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲ್ ನಿರ್ದೇಶಕರಾದ. ಶ್ರೀ ಜಗನಾಥ್ ಕರಂಜೆ. ಶ್ರೀ ನಂದಾ ವಿವೇಕಾನಂದ ಶ್ರೀ ಶ್ರೀಕಾಂತ್ ಸ್ವಾಮಿ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಅಮೃತ ಹೊಸಮನಿ ಉಪಸ್ಥಿತರಿದ್ದರು.

## ಹೈಕೋರ್ಟ್ ತೀರ್ಪಿಗೆ ಸ್ವಾಗತ - ಶ್ರೀ ಎಸ್ ಆರ್ ಸತೀಶ್ಚಂದ್ರ




**ಮಂಗಳೂರು:** ರಾಜ್ಯದ ಸೌಹಾರ್ದ ಸಹಕಾರಿಗಳು ಆದಾಯ ತೆರಿಗೆ ಕಲಂ 80ಪಿ(2) ರಡಿಯಲ್ಲಿ ತೆರಿಗೆ ವಿನಾಯಿತಿಗೆ ಅರ್ಹವೆಂದು ರಾಜ್ಯ ಉಚ್ಚ ನ್ಯಾಯಾಲಯ ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಶ್ರೀ ಎಸ್.ಆರ್ ಸತೀಶ್ಚಂದ್ರ, ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರು, ದಿನಾಂಕ 23.01.2020ರಂದು ಮಂಗಳೂರಿನ ಪತ್ರಕರ್ತರ ಭವನದಲ್ಲಿ ಪತ್ರಿಕಾ ಗೋಷ್ಠಿಯನ್ನು ನಡೆಸಿದರು.

ಈ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಒಕ್ಕೂಟ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶ್ ರೈ ರವರು, ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಜಿ. ಆರ್ ಪ್ರಸಾದ್ ರವರು, ಒಕ್ಕೂಟದ ನಿರ್ದೇಶಕರಾದ ಶ್ರೀ ಗಣೇಶ ಶೆಣೈ ಇವರು ಉಪಸ್ಥಿತರಿದ್ದರು.

## ಸೌಹಾರ್ದ ಸಹಕಾರಿಗಳಿಗೂ ತೆರಿಗೆ ವಿನಾಯತಿ, - ಶ್ರೀ ಸಂಜೀವ ಮಹಾಜನ




**ಕಲಬುರಗಿ:** ರಾಜ್ಯದ ಸೌಹಾರ್ದ ಸಹಕಾರಿಗಳು ಆದಾಯ ತೆರಿಗೆ ಕಲಂ 80ಪಿ(2) ರಡಿಯಲ್ಲಿ ತೆರಿಗೆ ವಿನಾಯಿತಿಗೆ ಅರ್ಹವೆಂದು ರಾಜ್ಯ ಉಚ್ಚ ನ್ಯಾಯಾಲಯ ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಶ್ರೀ ಸಂಜೀವ ಮಹಾಜನ, ಸಂಯುಕ್ತ ಸಹಕಾರಿಯ ನಿರ್ದೇಶಕರು ದಿನಾಂಕ 24.01.2020 ರಂದು ಕಲಬುರಗಿ ಪತ್ರಕರ್ತರ ಭವನದಲ್ಲಿ ಪತ್ರಿಕಾ ಗೋಷ್ಠಿಯನ್ನು ನಡೆಸಿದರು.

ಈ ಸಂದರ್ಭದಲ್ಲಿ ಶ್ರೀ ವೈ.ಟಿ. ಪಾಟೀಲರವರು ಸಂಯುಕ್ತ ಸಹಕಾರಿಯ ನಿರ್ದೇಶಕರು, ಶ್ರೀ ಎಸ್. ಎಸ್. ಪಾಟೀಲ ಬಸವೇಶ್ವರ ಸುದ್ದಿ ಮಹಾಮಂಡಳ ನಿರ್ದೇಶಕರು, ಕಲಬುರಗಿ ಜಿಲ್ಲಾ ಒಕ್ಕೂಟ ಸೌಹಾರ್ದ ಸಹಕಾರಿಗಳ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಪರಸರೆಡ್ಡಿ ರವರು, ಶ್ರೀಮತಿ ಸಾವಿತ್ರಿ ಕುಳಗೆರಿ ಅಧ್ಯಕ್ಷರು ಆಸ್ಥಾ ಮಹಿಳಾ ಸೌಹಾರ್ದ ಸಹಕಾರಿ ನಿ., ಕಲಬುರಗಿ, ಶ್ರೀ ರಾಜಶೇಖರ ಹೆಚ್ ಪ್ರಾಂತೀಯ ವ್ಯವಸ್ಥಾಪಕರು ಉಪಸ್ಥಿತರಿದ್ದರು.

## ಸಹಕಾರಿ ಸಂಘಗಳು ಇನ್ಮುಂದೇ ಆದಾಯ ತೆರಿಗೆ ಮುಕ್ತ - ಶ್ರೀಮತಿ ಸರಸ್ವತಿ ಎನ್ ರವಿ




**ಉತ್ತರ ಕನ್ನಡ:** ದಿನಾಂಕ 21.01.2020 ರಂದು ಶಿರಸಿಯ ಸ್ಕೊಡವೇಸ್ ಮಹಿಳಾ ಸೌಹಾರ್ದ ಸಹಕಾರಿಯಲ್ಲಿ ಜರುಗಿದ ಪತ್ರಿಕಾ ಗೋಷ್ಠಿಯಲ್ಲಿ ಶ್ರೀಮತಿ ಸರಸ್ವತಿ ಎನ್. ರವಿ. ಮಾನ್ಯ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಮಾತನಾಡುತ್ತಾ ಸಹಕಾರಿ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಸೌಹಾರ್ದ ಸಹಕಾರಿಗಳು ಸಹಕಾರಿ ಸಂಘಗಳಲ್ಲ ಎಂದು ಆದಾಯ ತೆರಿಗೆ ಇಲಾಖೆಯಿಂದ ಸೌಹಾರ್ದ ಸಹಕಾರಿಗಳಿಗೆ ತೆರಿಗೆ ಕಟ್ಟುವಂತೆ ನೋಟಿಸ್ ನೀಡಲಾಗುತ್ತಿತ್ತು. ಇದರಿಂದಾಗಿ ಸೌಹಾರ್ದ ಸಹಕಾರಿಗಳು ಆದಾಯ ತೆರಿಗೆ ಇಲಾಖೆಯಿಂದ ಕಿರುಕುಳ ಅನುಭವಿಸುತ್ತಿದ್ದವು. ಈ ಸಮಸ್ಯೆಯನ್ನು ಪರಿಹರಿಸುವಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತವು ಕಳೆದ ಎರಡು ವರ್ಷಗಳಿಂದ ನಿರಂತರವಾಗಿ ಪ್ರಯತ್ನ ನಡೆಸುತ್ತಾ ಬಂದಿತ್ತು. ಇದರ ಫಲವಾಗಿ ಸೌಹಾರ್ದ ಸಹಕಾರಿಗಳೂ ಕೂಡ "ಸಹಕಾರಿ ಸಂಘ" ಗಳೆಂದು ಕರ್ನಾಟಕ ರಾಜ್ಯ ಹೈಕೋರ್ಟ ಮಹತ್ವದ ಐತಿಹಾಸಿಕ ತೀರ್ಪು ನೀಡಿರುತ್ತದೆ. ಇದರಿಂದಾಗಿ ಸೌಹಾರ್ದ ಸಹಕಾರಿಗಳು ಅನುಭವಿಸುತ್ತಿದ್ದ ಆದಾಯ ತೆರಿಗೆಯ ಹೊರೆಯಿಂದ ಮುಕ್ತವಾದಂತಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೌಹಾರ್ದ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರು ಮತ್ತು ಕೆ.ಡಿ.ಸಿ.ಸಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಸಹಕಾರಿ ಸಂಘಗಳ ಕಾಯ್ದೆ 1959 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಈ ಎರಡೂ ಕಾಯ್ದೆಗಳೂ ರಾಜ್ಯದಲ್ಲಿ ಜಾರಿಯಲ್ಲಿದ್ದು, ಈ ಎರಡೂ ಕಾಯ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿಗಳಿಗೆ ಆದಾಯ ತೆರಿಗೆ ವಿನಾಯಿತಿ ಇದೆ ಎಂದು ತೀರ್ಪಿನಲ್ಲಿ ಉಲ್ಲೇಖಿಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಗಂಗಾರಾಮ ಸಗ್ಗು ಕೊಳಾಪ್ಟೆ ಮತ್ತು ಸ್ಕೊಡವೇಸ್ ಮಹಿಳಾ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಗಣಪತಿ ನಾಯ್ಕ ಉಪಸ್ಥಿತರಿದ್ದರು.

## ಸೌಹಾರ್ದ ಸಹಕಾರಿಗಳು ಆದಾಯ ತೆರಿಗೆ ವಿನಾಯಿತಿಗೆ ಅರ್ಹ - ಶ್ರೀ ಆರ್ ತಿಮ್ಮಯ್ಯ ಶೆಟ್ಟಿ




**ರಾಯಚೂರು:** ರಾಜ್ಯದ ಸೌಹಾರ್ದ ಸಹಕಾರಿಗಳು ಆದಾಯ ತೆರಿಗೆ ಕಲಂ 80ಪಿ(2) ರಡಿಯಲ್ಲಿ ತೆರಿಗೆ ವಿನಾಯಿತಿಗೆ ಅರ್ಹವೆಂದು ರಾಜ್ಯ ಉಚ್ಚ ನ್ಯಾಯಾಲಯ ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಶ್ರೀ ಆರ್ ತಿಮ್ಮಯ್ಯ ಶೆಟ್ಟಿ, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು, ದಿನಾಂಕ 27.01.2020 ರಂದು ರಾಯಚೂರ ಪತ್ರಕರ್ತರ ಭವನದಲ್ಲಿ ಪತ್ರಿಕಾ ಗೋಷ್ಠಿಯನ್ನು ನಡೆಸಿದರು. ಈ ಸಂದರ್ಭದಲ್ಲಿ ಶ್ರೀ ರಾಜಶೇಖರ ಹೆಚ್ ಪ್ರಾಂತೀಯ ವ್ಯವಸ್ಥಾಪಕರು ಉಪಸ್ಥಿತರಿದ್ದರು.

## ಆದಾಯ ತೆರಿಗೆ ಹೊರೆಯಿಂದ ಸಹಕಾರ ಕ್ಷೇತ್ರ ಪಾರು - ಶ್ರೀ ಎ. ಆರ್ ಪ್ರಸನ್ನ ಕುಮಾರ್




**ಶಿವಮೊಗ್ಗ:** ದಿನಾಂಕ 28.01.2020 ರಂದು ಸೌಹಾರ್ದ ಸಹಕಾರಿಗಳು ಕೂಡ ಸಹಕಾರಿ ಸಂಘಗಳೆಂದು ಕರ್ನಾಟಕ ರಾಜ್ಯದ ಮಾನ್ಯ ಉಚ್ಚ ನ್ಯಾಯಾಲಯ ಐತಿಹಾಸಿಕ ತೀರ್ಪನ್ನು ನೀಡಿರುವ ಹಿನ್ನೆಲೆಯಲ್ಲಿ ಶಿವಮೊಗ್ಗದ ಪ್ರೆಸ್ ಟ್ರಸ್ಟ್‌ನಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಪ್ರಸನ್ನಕುಮಾರ್ ಎ.ಆರ್. ರವರ ನೇತೃತ್ವದಲ್ಲಿ ಪತ್ರಿಕಾಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿತ್ತು. ಇದೇ ಸಂದರ್ಭದಲ್ಲಿ ಹೊಯ್ಸಳ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಶಂಕರ್ ಎಂ. ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಮಧುಕರ ಹೆಗಡೆ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ರವರು ಉಪಸ್ಥಿತರಿದ್ದರು.

## ತೆರಿಗೆ ವಿನಾಯಿತಿ ನೀಡಲು ಅಗ್ರಹ - ಶ್ರೀ ವೈ.ಟಿ ಪಾಟೀಲ್




**ಯಾದಗಿರಿ:** ರಾಜ್ಯದ ಸೌಹಾರ್ದ ಸಹಕಾರಿಗಳು ಆದಾಯ ತೆರಿಗೆ ಕಲಂ 80ಪಿ(2) ರಡಿಯಲ್ಲಿ ತೆರಿಗೆ ವಿನಾಯಿತಿಗೆ ಅರ್ಹವೆಂದು ರಾಜ್ಯ ಉಚ್ಚ ನ್ಯಾಯಾಲಯ ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಶ್ರೀ ವೈ ಟಿ ಪಾಟೀಲ್, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು, ಇವರು ದಿನಾಂಕ 23.01.2020ರಂದು ಕೆಂಬಾವಿ ನಗರ ಹೇಮರಡ್ಡಿ ಮಲ್ಲಮ್ಮ ಕಲ್ಯಾಣ ಮಂಟಪ ದಲ್ಲಿ ಪತ್ರಿಕಾ ಗೋಷ್ಠಿಯನ್ನು ನಡೆಸಿದರು.

ಈ ಸಂದರ್ಭದಲ್ಲಿ ಹೇಮರೆಡ್ಡಿ ಮಲ್ಲಮ್ಮ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್ ಎಂ ಬಿರಾದಾರ, ಬಸವ ವಿವಿದ್ದೋದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಶರಣಬಸವ ದಿಗ್ಗಾವಿ, ಮಲ್ಲಿಕಾರ್ಜುನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಹೆಚ್ ಎನ್ ಪಾಟೀಲ್ ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ಉಪಸ್ಥಿತರಿದ್ದರು.

## ಹೈಕೋರ್ಟ್ ತೀರ್ಪಿನಿಂದ ತೆರಿಗೆ ವಿನಾಯ್ತಿ - ಶ್ರೀ ಬಿ. ಗಂಗಾಧರಯ್ಯ




**ತುಮಕೂರು:** ದಿನಾಂಕ 29.01.2020 ರಂದು ಸೌಹಾರ್ದ ಸಹಕಾರಿಗಳು ಕೂಡ ಸಹಕಾರಿ ಸಂಘಗಳೆಂದು ಕರ್ನಾಟಕ ರಾಜ್ಯದ ಮಾನ್ಯ ಉಚ್ಚ ನ್ಯಾಯಾಲಯ ಐತಿಹಾಸಿಕ ತೀರ್ಪನ್ನು ನೀಡಿರುವ ಹಿನ್ನೆಲೆಯಲ್ಲಿ ತುಮಕೂರಿನ ಸೇಕ್ರೆಡ್ ಹಾರ್ಟ್ ಸೌಹಾರ್ದ ಸಹಕಾರಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ಮಾನ್ಯ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯನವರ ಅಧ್ಯಕ್ಷತೆಯಲ್ಲಿ ಪತ್ರಿಕಾಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿತ್ತು. ಇದೇ ಸಂದರ್ಭದಲ್ಲಿ ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣ್, ಉಪಾಧ್ಯಕ್ಷರಾದ ಶ್ರೀ ಲ್ಯಾನ್ಸಿ ಹೆಚ್ ಪಾಯ್ಸ್, ಮಾನ್ಯ ನಿರ್ದೇಶಕರಾದ ಶ್ರೀ ಸುರೇಶ್ ರಾವ್, ಹಾಗೂ ತುಮಕೂರು ಜಿಲ್ಲಾ ಸಂಯೋಜಕರಾದ ಶ್ರೀ ಕುಶಾಲ್ ಹೆಚ್. ಎಂ. ರವರು ಉಪಸ್ಥಿತರಿದ್ದರು.

## ನಿರಂತರ ಹೋರಾಟಕ್ಕೆ ಸಿಕ್ಕ ಪರಿಹಾರ - ಶ್ರೀ ಕೆ.ಎಸ್. ಶ್ಯಾಮಸುಂದರ್

**ಹಾಸನ :** ರಾಜ್ಯದ ಸೌಹಾರ್ದ ಸಹಕಾರಿಗಳು ಆದಾಯ ತೆರಿಗೆ ಕಲಂ. 80ಪಿ(2)ರಡಿಯಲ್ಲಿ ತೆರಿಗೆ ವಿನಾಯಿತಿಗೆ ಅರ್ಹವೆಂದು ರಾಜ್ಯ ಉಚ್ಚ ನ್ಯಾಯಾಲಯ ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ದಿನಾಂಕ: 27–01–2020 ರಂದು ಹಾಸನ ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾ ಗೋಷ್ಠಿಯನ್ನು ಆಯೋಜನೆ ಮಾಡಲಾಗಿತ್ತು. ಸಾಯಿರಾಂ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಕೆ.ಎಸ್ ಶ್ಯಾಮ್‌ಸುಂದರ್, ಶ್ರೀ ಪುಷ್ಪಗಿರಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ರೇವಣ್ಣಯ್ಯ ಹಾಗೂ ಶ್ರೀ ಸಾಯಿರಾಂ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಮಂಜುನಾಥ್ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಸಂತೋಷ್ ಎಂಜೆ ರವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಸೌಹಾರ್ದ ಸಹಕಾರ ಸಂಸ್ಥೆಗಳ ನಡುವಿನ ಕಾನೂನು ಹೋರಾಟಕ್ಕೆ ತೆರೆ - ಶ್ರೀ ಎಂ.ಕೆ. ಸೋಮಯ್ಯ




**ಮಡಿಕೇರಿ:** ದಿನಾಂಕ 28.01.2020 ರಂದು ಸೌಹಾರ್ದ ಸಹಕಾರಿಗಳು ಕೂಡ ಸಹಕಾರಿ ಸಂಘಗಳೆಂದು ಕರ್ನಾಟಕ ರಾಜ್ಯದ ಮಾನ್ಯ ಉಚ್ಚ ನ್ಯಾಯಾಲಯ ಐತಿಹಾಸಿಕ ತೀರ್ಪನ್ನು ನೀಡಿರುವ ಹಿನ್ನೆಲೆಯಲ್ಲಿ ಮಡಿಕೇರಿಯಲ್ಲಿ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಎಂ.ಕೆ. ಸೋಮಯ್ಯ ರವರ ನೇತೃತ್ವದಲ್ಲಿ ಪತ್ರಿಕಾಗೋಷ್ಠಿಯನ್ನು ನಡೆಸಿದರು.

## ಆದಾಯ ತೆರಿಗೆ ಅಡಿ ಸಹಕಾರಿಗಳು - ಶ್ರೀ ಜಿ. ಶ್ರೀಧರ್




**ಕೊಪ್ಪಳ:** ರಾಜ್ಯದ ಸೌಹಾರ್ದ ಸಹಕಾರಿಗಳು ಆದಾಯ ತೆರಿಗೆ ಕಲಂ 80ಪಿ(2) ರಡಿಯಲ್ಲಿ ತೆರಿಗೆ ವಿನಾಯಿತಿಗೆ ಅರ್ಹವೆಂದು ರಾಜ್ಯ ಉಚ್ಚ ನ್ಯಾಯಾಲಯ ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ. ಜಿ. ಶ್ರೀಧರ್ ರವರು ದಿನಾಂಕ 28.01.2020ರಂದು ಕೊಪ್ಪಳ ಮೀಡಿಯಾ ಕ್ಲಬ್ ನಲ್ಲಿ ಪತ್ರಿಕಾ ಗೋಷ್ಠಿಯನ್ನು ನಡೆಸಿದರು.

ಈ ಸಂದರ್ಭದಲ್ಲಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ.ಪತ್ತಾರ, ಮಾನ್ಯ ಉಪಾಧ್ಯಕ್ಷರಾದ ಶ್ರೀ ಶಂಕರಗೌಡ. ಎಲ್.ಹೆಚ್, ಒಕ್ಕೂಟದ ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುರಾಜ್, ಶ್ರೀ ಚನ್ನಬಸಪ್ಪ ಕೆ, ಶ್ರೀ ಯಲ್ಲಪ್ಪ ಮತ್ತು ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಶರಣಪ್ಪ ಹ್ಯಾಟಿ ಹಾಗೂ ಜಿಲ್ಲಾ ಸಂಯೋಜಕರಾದ ಪವನ್ ಉಪಸ್ಥಿತರಿದ್ದರು.

## ಸೌಹಾರ್ದ ಸಹಕಾರಿಗಳು ಸಹಕಾರ ಸಂಘಗಳು ಒಂದೇ - ಶ್ರೀ ಜಿ. ನಂಜನಗೌಡ



**ದಾವಣಗೆರೆ:** ರಾಜ್ಯದ ಸೌಹಾರ್ದ ಸಹಕಾರಿಗಳು ಆದಾಯ ತೆರಿಗೆ ಕಲಂ 80ಪಿ(2) ರಡಿಯಲ್ಲಿ ತೆರಿಗೆ ವಿನಾಯಿತಿಗೆ ಅರ್ಹವೆಂದು ರಾಜ್ಯ ಉಚ್ಚ ನ್ಯಾಯಾಲಯ ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಶ್ರೀ ಜಿ ನಂಜನಗೌಡ, ಸಂಯುಕ್ತ ಸಹಕಾರಿಯ ದಾವಣಗೆರೆ ಜಿಲ್ಲಾ ನಿರ್ದೇಶಕರು ದಿನಾಂಕ 23.01.2020 ರಂದು ದಾವಣಗೆರೆ ನಗರದ ಪತ್ರಕರ್ತರ ಭವನದಲ್ಲಿ ಪತ್ರಿಕಾ ಗೋಷ್ಠಿಯನ್ನು ನಡೆಸಿದರು.

ಈ ಸಂದರ್ಭದಲ್ಲಿ ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಹೆಚ್. ಎಂ. ನಾಗರಾಜ್ ರವರು, ಸ್ವಾಮಿ ವಿವೇಕಾನಂದ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಹಾಗೂ ದಾವಣಗೆರೆ ಮಹಾನಗರ ಪಾಲಿಕೆಯ ಸದಸ್ಯರಾದ ಶ್ರೀ ಎಸ್. ಟಿ. ವೀರೇಶ್ ರವರು, ಜಿ.ಎಂ. ಪತ್ತಿನ ಸೌಹಾರ್ದ ಸಹಕಾರಿಯ ಜನರಲ್ ಮ್ಯಾನೇಜರ್ ಆದ ಶ್ರೀ ಮಲ್ಲಪ್ಪರವರು, ಮನಿಪ್ಲಾಂಟ್ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಡಿ. ನಾಗರಾಜ್ ಮೂರ್ತಿಯವರು ಹಾಗೂ ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಉಪಸ್ಥಿತರಿದ್ದರು.



**ಚಾಮರಾಜನಗರ:** ದಿನಾಂಕ 29.01.2020 ರಂದು ಚಾಮರಾಜನಗರದಲ್ಲಿ ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 16.01.2020 ರಂದು ಸೌಹಾರ್ದ ಸಹಕಾರಿಗಳು ಕೂಡ ಸಹಕಾರಿ ಸಂಘಗಳೆಂದು ಐತಿಹಾಸಿಕ ತೀರ್ಪನ್ನು ನೀಡಿರುವ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಆರ್. ದಿನೇಶ್ ಗುಪ್ತಾ ರವರ ನೇತೃತ್ವದಲ್ಲಿ ಪತ್ರಿಕಾಗೋಷ್ಠಿಯನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಎಸ್. ಬಾಲಸುಬ್ರಹ್ಮಣ್ಯ ರವರು, ನವ್ಯಕರ್ನಾಟಕ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ಹರವೆ ಮಂಜು, ಚಾಮರಾಜನಗರ ಜಿಲ್ಲಾ ಸಂಯೋಜಕರಾದ ಎಂ. ಚಂದ್ರಶೇಖರಯ್ಯ ಉಪಸ್ಥಿತರಿದ್ದರು.



**ಚಿಕ್ಕಮಂಗಳೂರು:** ರಾಜ್ಯದ ಸೌಹಾರ್ದ ಸಹಕಾರಿಗಳು ಆದಾಯ ತೆರಿಗೆ ಕಲಂ. 80ಪಿ(2)ರಡಿಯಲ್ಲಿ ತೆರಿಗೆ ವಿನಾಯಿತಿಗೆ ಅರ್ಹವೆಂದು ರಾಜ್ಯ ಉಚ್ಚ ನ್ಯಾಯಾಲಯ ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ದಿನಾಂಕ 27-01-2020 ರಂದು ಚಿಕ್ಕಮಗಳೂರಿನ ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾ ಗೋಷ್ಠಿಯನ್ನು ಆಯೋಜನೆ ಮಾಡಲಾಗಿತ್ತು. ಯಡಗೆರೆ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ವೈ.ಎಸ್ ಸುಬ್ರಮಣ್ಯ, ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾ-ರಿಯಾದ ಶ್ರೀ ಸುಧೀರ್, ಗಾಯತ್ರಿ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್ ಎನ್ ವಿಶ್ವನಾಥ್ ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ಸಂತೋಷ್ ಎಂಜೆ ರವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಸಂಯುಕ್ತ ಸಹಕಾರಿ ನೇತೃತ್ವದಲ್ಲಿ ಗುರುರಾಘವೇಂದ್ರ ಸಹಕಾರ ಬ್ಯಾಂಕಿನಲ್ಲಿ ಹಣ ತೇವಣಿ ಮಾಡಿದ ಸೌಹಾರ್ದ ಸಹಕಾರಿಗಳ ಸಭೆ

**ಬೆಂಗಳೂರು:** ಶ್ರೀ ಗುರು ರಾಘವೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಹಣ ತೊಡಗಿಸಿ ತೊಂದರೆಗೆ ಸಿಲುಕಿರುವ ಸೌಹಾರ್ದ ಸಹಕಾರಿಗಳ ಸಭೆಯನ್ನು ಉದಯ ಸೌಹಾರ್ದ ಸಹಕಾರಿಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ಇವರ ನೇತೃತ್ವದಲ್ಲಿ ನಡೆಯಿತು. ಈ ಸಭೆಗೆ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಆಗಮಿಸಿರುದ್ದರು.

ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡೂರಾವ್, ಹಿರಿಯ ನ್ಯಾಯವಾದಿಗಳಾದ ಶ್ರೀ ಬಿ.ವಿ. ಮಲ್ಲಾರೆಡ್ಡಿ, ಸಂಯುಕ್ತ ಸಹಕಾರಿಯ ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ, ಬೆಂಗಳೂರು ಪ್ರಾಂತೀಯ ಕಛೇರಿಯ ಕಾನೂನು ವ್ಯವಸ್ಥಾಪಕರಾದ ಶ್ರೀ ಸಂಜಯ್ ಕೋರಟಕರ್ ಹಾಗೂ ಬೆಂಗಳೂರು ನಗರದ ಸೌಹಾರ್ದ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಉಪಸ್ಥಿತರಿದ್ದರು.

## ಭೇಟಿ

**ರಾಯಚೂರು:** ದಿನಾಂಕ 20.01.2020ರಂದು ರಾಯಚೂರ ಜಿಲ್ಲೆಯ ಸಿರವಾರ ನಗರದ ಶ್ರೀ ಸಿರವಾರ ಪತ್ತಿನ ಸಹಕಾರ ಸಂಘ ನಿ., ಸಿರವಾರ ಸದರಿ ಸಹಕಾರಿಗೆ ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ಶ್ರೀ ಆರ್ ತಿಮ್ಮಯ್ಯ ಶೆಟ್ಟಿ ಇವರು ಭೇಟಿ ನೀಡಿ ಸಂಘದ ಕಾರ್ಯಚಟುವಟಿಗಳ ಕುರಿತು ಚರ್ಚಿಸಿದರು ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮದ ನಿರ್ದೇಶಕರಾದ ಶ್ರೀ ಎಸ್ ಎಸ್ ಪಾಟೀಲ್ ಮತ್ತು ಸಂಯುಕ್ತ ಸಹಕಾರಿಯ ಕಲಬುರ್ಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ್ ಹೆಚ್ ರವರು ಉಪಸ್ಥಿತರಿದ್ದರು.

ದಿನಾಂಕ 20.01.2020ರಂದು ರಾಯಚೂರ ಜಿಲ್ಲೆಯ ಸಿರವಾರ ನಗರದ ಶ್ರೀ ಜಂಬಲದ್ದಿನಿ ಪತ್ತಿನ ಸೌಹಾರ್ದ ಸಹಕಾರಿ ನಿ. ಸಿರವಾರ ಸದರಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ಶ್ರೀ ಆರ್ ತಿಮ್ಮಯ್ಯ ಶೆಟ್ಟಿ ಇವರು ಭೇಟಿ ನೀಡಿ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮದ ನಿರ್ದೇಶಕರಾದ ಶ್ರೀ ಎಸ್ ಎಸ್ ಪಾಟೀಲ್ ಮತ್ತು ಸಂಯುಕ್ತ ಸಹಕರಿಯ ಕಲಬುರ್ಗಿ ಪ್ರಾಂತೀಯ ಅಧಿಕಾರಿಗಳದ ಶ್ರೀ ರಾಜಶೇಖರ್ ಹೆಚ್ ಉಪಸ್ಥಿತರಿದ್ದರು.

**ಯಾದಗಿರಿ:** ದಿನಾಂಕ 23.01.2020 ರಂದು ವಿಶ್ವ ವಿನಾಯಕ ಮಹಿಳಾ ಸೌಹಾರ್ದ ಸಹಕಾರಿ ನಿ., ಯಾದಗಿರಿ ಸದರಿ ಸಹಕಾರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವೈ.ಟಿ ಪಾಟೀಲ್ ಭೇಟಿ ನೀಡಿ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ರಾಜಶೇಖರ್ ಹೆಚ್ ಇವರು ಉಪಸ್ಥಿತರಿದ್ದರು.

## ಪ್ರವರ್ತಕರ ಸಭೆ

**ಬೀದರ:** ಬೀದರ ಜಿಲ್ಲೆಯ ನೂತನ ಸೌಹಾರ್ದ ಸಹಕಾರಿಯ ಪ್ರವರ್ತಕರ ಸಭೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಇವರು ಸೌಹಾರ್ದ ಸಹಕಾರಿ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ಬೀದರ ಜಿಲ್ಲೆಯ ಜಿಲ್ಲಾ ಸಂಯೋಜಕರಾದ ಶ್ರೀ ವೀರಶೆಟ್ಟಿ ಇವರು ಉಪಸ್ಥಿತರಿದ್ದರು.

## ಕ್ಲಸ್ಟರ್ ತರಬೇತಿ ಕಾರ್ಯಕ್ರಮ

**ಮೈಸೂರು:** ಗ್ರಾಮೀಣ ನಿಧಿ ಸೌಹಾರ್ದ ಕೋ-ಆಪರೇಟಿವ್ ಲಿ., ಸಾಲಿಗ್ರಾಮ ಇದರ ನಿರ್ದೇಶಕರಿಗೆ ಆಡಳಿತ ಮಂಡಲಿ ಸದಸ್ಯರ ಅಧಿಕಾರಗಳು ಮತ್ತು ಕರ್ತವ್ಯಗಳ ಕುರಿತು ಕ್ಲಸ್ಟರ್ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 04 ಜನವರಿ 2020 ರಂದು ಬಿ.ಡಿ.ಎಸ್ ಕಾಂಪ್ಲೆಕ್ಸ್, ಮಹಾವೀರ ರಸ್ತೆ, ಸಾಲಿಗ್ರಾಮ, ಕೆ.ಆರ್ ನಗರ ತಾಲ್ಲೂಕು, ಮೈಸೂರು ಜಿಲ್ಲೆಯಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್ ಎಸ್ ರವರು ಆಡಳಿತ ಮಂಡಲಿ ಸದಸ್ಯರ ಅಧಿಕಾರಗಳು ಮತ್ತು ಕರ್ತವ್ಯಗಳ ಬಗ್ಗೆ ಮಾಹಿತಿ ನೀಡಿದ್ದರು. ನಂತರ ಸಹಕಾರಿಯ ಕ್ಯಾಲೆಂಡರ್‌ನ್ನು ಬಿಡುಗಡೆ ಮಾಡಲಾಯಿತು.

## ಇ-ಸ್ಟಾಂಪಿಂಗ್ ಕೇಂದ್ರಗಳನ್ನು ನಡೆಸುತ್ತಿರುವ ಸೌಹಾರ್ದ ಸಹಕಾರಿಗಳ ಗಮನಕ್ಕೆ,

1. ಮೊದಲನೇ ಪಕ್ಷಗಾರ ಅಥವಾ ಎರಡನೇ ಪಕ್ಷಗಾರ ಹೆಸರಿನ ಸ್ಥಳದಲ್ಲಿ ವ್ಯಕ್ತಿಯ/ಸಂಸ್ಥೆಯ ಹೆಸರಿಲ್ಲದೇ ಕೇವಲ ಶ್ರೀ/ಶ್ರೀಮಾನ್/ಮಿಸ್ಟರ್/ಒಂದಕ್ಷರ ಬಳಸಿ ಇ-ಸ್ಟಾಂಪ್ ಮುದ್ರಿಸಬಾರದು.
2. ಬಾರೋವರ್(Borrower)/ಸಿರಿ(Siri)/ಓನರ್(Owner) etc., ಎಂಬ ಈ ತರಹದ ಪಕ್ಷಗಾರರ ಹೆಸರಿನಲ್ಲಿ ಯಾವುದೇ ಕಾರಣಕ್ಕೂ ಇ-ಸ್ಟಾಂಪ್‌ಗಳನ್ನು ಮುದ್ರಿಸಬಾರದು. ಇ-ಸ್ಟಾಂಪ್ ಪಡೆಯುವವರು ಎರಡು ಪಕ್ಷಗಾರರ ಹೆಸರುಗಳನ್ನು ಪೂರ್ಣವಾಗಿ ಮತ್ತು ಸ್ಪಷ್ಟವಾಗಿ ಬರೆಯತಕ್ಕದು.
3. ಸರ್ಕಾರ ಸೂಚಿಸಿರುವುದಕ್ಕಿಂತ ಹೆಚ್ಚಿನ ಸೇವಾ ಶುಲ್ಕ ಸ್ವೀಕರಿಸುವುದು ದಂಡನೀಯ ಅಪರಾಧ. ಈ ಕೆಳಗಿನಂತೆ ಸೇವಾ ಶುಲ್ಕವನ್ನು ಗ್ರಾಹಕರಿಂದ ಸಂಗ್ರಹಿಸತಕ್ಕದ್ದು.

   ಅ. ರೂ.10/– ರಿಂದ ರೂ.100/–ರ ವರೆಗಿನ ಸ್ಟ್ಯಾಂಪ್ ಪೇಪರ್‌ನ ಸೇವಾ ಶುಲ್ಕ – ರೂ.10/–

   ಆ. ರೂ.101/– ರಿಂದ ರೂ.5,000/–ದ ವರೆಗಿನ ಸ್ಟ್ಯಾಂಪ್ ಪೇಪರ್‌ನ ಸೇವಾ ಶುಲ್ಕ – ರೂ.15/–

   ಇ. ರೂ.5,000/– ಮೇಲ್ಪಟ್ಟ ಸ್ಟ್ಯಾಂಪ್ ಪೇಪರ್‌ಗೆ ಗ್ರಾಹಕರಿಂದ ಸೇವಾ ಶುಲ್ಕವನ್ನು ಸ್ವೀಕರಿಸಬಾರದು.

   ಸಹಕಾರಿಯ ಇ-ಸ್ಟಾಂಪ್ ಕೇಂದ್ರದ ಸೂಚನಾ ಫಲಕದಲ್ಲಿ ಇ-ಸ್ಟಾಂಪ್‌ನ ಸೇವಾ ಶುಲ್ಕದ ವಿವರಗಳನ್ನು ಕಡ್ಡಾಯವಾಗಿ ಸಾರ್ವಜನಿಕರಿಗೆ ಕಾಣುವಂತೆ ಪ್ರದರ್ಶಿಸುವುದು.
4. ಸಂಯುಕ್ತ ಸಹಕಾರಿಯ ಅಧಿಕಾರಿಗಳು ಹಾಗೂ ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಶನ್ ಆಫ್ ಇಂಡಿಯಾದ ಅಧಿಕಾರಿಗಳು ಮುನ್ಸೂಚನೆ ನೀಡದೆ ಎಸಿಸಿ ಕೇಂದ್ರಕ್ಕೆ ಭೇಟಿ ನೀಡಿ ಇ-ಸ್ಟಾಂಪ್ ವಿತರಣೆ ಬಗ್ಗೆ ಪರಿವೀಕ್ಷಣೆ ನಡೆಸಬಹುದು.
5. ಸಹಕಾರಿಗಳು ಎಸಿಸಿ ಕೇಂದ್ರದ ಟ್ರೇಡಿಂಗ್ ಖಾತೆಯಲ್ಲಿ ಹೊಂದಿರುವ ಶಿಲ್ಕಿನಷ್ಟು ಮೊತ್ತದ ಇ-ಸ್ಟಾಂಪ್ ವಿತರಿಸುವುದು. ಸಹಕಾರಿಗಳ ಇ-ಸ್ಟಾಂಪ್ ಕೇಂದ್ರಗಳು ನೆಗೆಟಿವ್ ಇ-ಸ್ಟಾಂಪ್ ಶಿಲ್ಕನ್ನು ಹೊಂದದಿರಲು ಸೂಚಿಸಿದೆ. ಸತತ ನೆಗೆಟಿವ್ ಇ-ಸ್ಟಾಂಪ್ ಶಿಲ್ಕನ್ನು ಹೊಂದಿರುವ ಸಹಕಾರಿಗಳ ಐಡಿಗಳು ಲಾಕ್ ಆಗುವುದು. ಈ ರೀತಿ ಲಾಕ್ ಆದ ಐಡಿಗಳಿಗೆ ನೆಗೆಟಿವ್ ಶಿಲ್ಕಿನ ಸಮಸ್ಯೆ ಬಗೆಹರಿದ ನಂತರದ ದಿನ ಪಾಸ್‌ವರ್ಡ್ ರಚನೆ (Create) ಆಗುತ್ತದೆ.
6. ಸಂಯುಕ್ತ ಸಹಕಾರಿಯ ಇ-ಸ್ಟಾಂಪ್ ವಿಭಾಗಕ್ಕೆ ಹಣ ವರ್ಗಾಯಿಸಲು ತಮಗೆ ನೀಡಿರುವ ವರ್ಚ್ಯುಲ್ ಅಕೌಂಟ್ ನಂಬರ್‌ರನ್ನು (virtual account number) ಕಡ್ಡಾಯವಾಗಿ ಬಳಸಿ ಹಣ ವರ್ಗಾಯಿಸುವುದು. ತಮ್ಮ ಎಸಿಸಿ ಕೇಂದ್ರದ Virtual account number ಮಾಹಿತಿಯ ಪ್ರತಿಯನ್ನು ಪ್ರಿಂಟ್ ತೆಗೆದು ತಮ್ಮ ಸಂಸ್ಥೆಯಲ್ಲಿ ಇಟ್ಟುಕೊಳ್ಳುವುದು, virtual account number ನಲ್ಲಿ ಬದಲಾವಣೆ ಅಥವಾ ಸಮಸ್ಯೆಯಿದ್ದಲ್ಲಿ ಸಂಯುಕ್ತ ಸಹಕಾರಿಯು ತಮ್ಮ ಗಮನಕ್ಕೆ ತರುತ್ತದೆ. ಅಲ್ಲಿಯವರೆಗು ತಮಗೆ ನೀಡಿರುವ virtual account number ನ್ನು ಬಳಸಿ ಸಂಯುಕ್ತ ಸಹಕಾರಿಗೆ ಹಣ ವರ್ಗಾಯಿಸಬೇಕು
7. ಎರರ್ ರಿಪೋರ್ಟ ಫಾರಂ ಕಳುಹಿಸಿದ ನಂತರದ 3 ಗಂಟೆಗಳಲ್ಲಿ ಸಮಸ್ಯೆ ಬಗೆಹರಿಸಲಾಗುವುದು. ಎರರ್ ರಿಪೋರ್ಟ ಫಾರಂನ್ನು ಸಂಯುಕ್ತ ಸಹಕಾರಿಯ estamppassword.error@souharda.coop ಇ-ಮೇಲ್ ಐಡಿಗೆ ಕಳುಹಿಸಲು ಸೂಚಿಸಿದೆ. ಎರರ್ ರಿಪೋರ್ಟ ಫಾರಂನೊಂದಿಗೆ ಗ್ರಾಹಕರ ಅರ್ಜಿಯನ್ನು ಕಡ್ಡಾಯವಾಗಿ ಕಳುಹಿಸುವುದು..
8. ಸಂಯುಕ್ತ ಸಹಕಾರಿಯು ಇ-ಸ್ಟಾಂಪ್ ಎಸಿಸಿ ನಡೆಸುತ್ತಿರುವ ಸಹಕಾರಿಗಳಿಗೆ ಮಾರ್ಚ್ 2019 ರಿಂದ ಡಿಸೆಂಬರ್ 2019ರವರೆಗಿನ ಕಮಿಷನ್ ಪಾವತಿಸಬೇಕಿದ್ದು, ಇದಕ್ಕಾಗಿ ಜಿ.ಎಸ್.ಟಿ ಕಾಯ್ದೆಯಲ್ಲಿ ನೋಂದಣಿಯಾದ ಸಹಕಾರಿಗಳು ಸಂಯುಕ್ತ ಸಹಕಾರಿಗೆ GST Invoice ನೀಡುವುದು. ಇನ್ನು ಜಿ.ಎಸ್.ಟಿ ಕಾಯ್ದೆಯಲ್ಲಿ ನೋಂದಣಿಯಾಗದ ಸಹಕಾರಿಗಳು Supply Invoice ನೀಡುವುದು. ಎಲ್ಲ ಸಹಕಾರಿಗಳು Invoice ನೀಡುವುದು ಕಡ್ಡಾಯವಾಗಿರುತ್ತದೆ.

9. ಪಾಸ್‌ವರ್ಡ್ ರೀಸೆಟ್‌ಗಾಗಿ ಅರ್ಜಿ ಕಳುಹಿಸಿದ 60 ನಿಮಿಷಗಳ ನಂತರ, ತಮಗೆ ಹೊಸ ಪಾಸ್‌ವರ್ಡ್ ಸಿಗದಿದ್ದ ಪಕ್ಷದಲ್ಲಿ ಮಾತ್ರ ಸಂಯುಕ್ತ ಸಹಕಾರಿಗೆ ಕರೆ ಮಾಡುವುದು. ಹೆಚ್ಚಿನ ಸಹಕಾರಿಗಳು ಪಾಸ್‌ವರ್ಡ್ ರೀಸೆಟ್‌ಗಾಗಿ ಅರ್ಜಿ ಕಳುಹಿಸಿದ ತಕ್ಷಣ ಕರೆ ಮಾಡಿ ವಿಚಾರಿಸುವುದರಿಂದ, ಪಾಸ್‌ವರ್ಡ್ ರೀಸೆಟ್ ಕಾರ್ಯ ಇನ್ನು ನಿಧಾನವಾಗುತ್ತದೆ.

10. ಬ್ಯಾಂಕ್ ಸರ್ವರ್ ಸಮಸ್ಯೆಯಿಂದ ಇಂಪ್ರೆಸ್ಟ್ ಖಾಲಿಯಾದ ದಿನದಲ್ಲಿ ಇ-ಸ್ಟಾಂಪ್ ಪೇಪರ್ ಪಡೆಯಲು ಸಾಧ್ಯವಾಗದಿದ್ದಲ್ಲಿ ಸ್ವಲ್ಪ ಸಮಯ ನಿರೀಕ್ಷಿಸುವುದು.

11. ಎಸಿಸಿಗೆ ಹೆಚ್ಚುವರಿ ಐಡಿ ಅವಶ್ಯಕತೆ ಇದ್ದಲ್ಲಿ, ಸಂಯುಕ್ತ ಸಹಕಾರಿಗೆ ಸೂಕ್ತ ಲಗತ್ತಿನೊಂದಿಗೆ Additional user ID Creation Form ಕಳುಹಿಸುವುದು.

12. ಮುದ್ರಣ ಯಂತ್ರ Samsung Laser Printer with Model No. M 3320 ND ಮಾತ್ರ ಇ-ಸ್ಟಾಂಪ್ ಮುದ್ರಣ ಕಾರ್ಯಕ್ಕಾಗಿ ಖರೀದಿಸುವುದು. ಪ್ರತಿ ಬಾರಿ ಕಾಟ್ರೇಡ್ಜ್ ಖಾಲಿಯಾದಾಗಲೂ ಹೊಸ ಕಾಟ್ರೇಡ್ಜ್‌ಗಳನ್ನೆ ಬಳಸಬೇಕು. ಸದರಿ ಮುದ್ರಣ ಯಂತ್ರವನ್ನು ಹಾಗೂ ಕಾಟ್ರೇಡ್ಜ್‌ಗಳನ್ನು ಮೆ॥ ಐ-ಲೀಡ್ ಸಲ್ಯೂಷನ್ಸ್, ಬೆಂಗಳೂರು ರವರಿಂದ ಖರೀದಿಸಬಹುದು. ಇದಕ್ಕಾಗಿ ತಮ್ಮ ಬಳಿ ಒಂದು ಕಾಟ್ರೇಡ್ಜ್ ಇರುವಾಗಲೇ printercartridge@souharda.coop ಗೆ ಇ-ಮೇಲ್ ಮೂಲಕ ಖರೀದಿ ಆದೇಶ ಸಲ್ಲಿಸಿ ಹೊಸ ಕಾಟ್ರೇಡ್ಜ್ ಉತ್ತಮ ಹಾಗೂ ಯೋಗ್ಯ ಬೆಲೆಯಲ್ಲಿ ಪಡೆಯುವುದು.

13. ಎಸಿಸಿಯಲ್ಲಿ ಐಡಿ ಹೊಂದಿರುವ ಯಾವುದೇ ಸಿಬ್ಬಂದಿ ರಾಜೀನಾಮೆ ನೀಡಿದ ಸಮಯದಲ್ಲಿ ಅಂತಹ ಸಿಬ್ಬಂದಿಯ ಐಡಿಗಳನ್ನು ID deactivation form ನ್ನು ಸಂಯುಕ್ತ ಸಹಕಾರಿಗೆ ಕಳುಹಿಸಿ ನಿಷ್ಕ್ರಿಯಗೊಳಿಸುವುದು. ಐಡಿ ಹೊಂದಿದ ಸಿಬ್ಬಂದಿಗಳ ಅನುಪಸ್ಥಿತಿಯಲ್ಲಿ ಅಂತಹ ಸಿಬ್ಬಂದಿಯ ಐಡಿಗಳನ್ನು ಬಳಸದಿರಲು ಸೂಚಿಸಿದೆ. ಬಳಕೆದಾರರು ತಾವು ಹೊಂದಿರುವ ಐಡಿ ಮತ್ತು ಗುಪ್ತ ಸಂಖ್ಯೆಗಳನ್ನು ಬೇರೊಬ್ಬರೊಂದಿಗೆ ಹಂಚಿಕೊಳ್ಳಬಾರದು.

14. ಇ-ಸ್ಟಾಂಪ್ ಮುದ್ರಣ ಕಾರ್ಯಕ್ಕೆ ಕಡ್ಡಾಯವಾಗಿ 2 ಕಂಪ್ಯೂಟರ್‌ಗಳನ್ನು ಬಳಸುವುದು.

15. ಇ-ಸ್ಟಾಂಪ್ ವಿಷಯದ ಹೆಚ್ಚಿನ ಮಾಹಿತಿ ಪಡೆಯಲು ಲಭ್ಯವಿರುವ ಇಮೇಲ್ ಐಡಿಗಳು,

| | |
|---|---|
| **estampid@souharda.coop** | **ಹೊಸ ಎಸಿಸಿಗಳ ಪ್ರಾರಂಭದ ಕುರಿತು ಹೊಸ ಐಡಿ, ಆಡಿಷನಲ್ ಐಡಿ / ಐಡಿ ಡಿಆಕ್ಟಿವೇಟ್ ಸಂಬಂಧಿತ ವಿಷಯಗಳು.** |
| **estamppassword.error@souharda.coop** | **ಪಾಸ್‌ವರ್ಡ್ ರೀಸೆಟ್, ಎರರ್ ರಿಪೋರ್ಟಿಂಗ್, ಸಂಬಂಧಿತ ವಿಷಯಗಳು.** |
| **estampaccount@souharda.coop** | **ಲೆಕ್ಕಪತ್ರಗಳಿಗೆ ಸಂಬಂಧಿಸಿದ ವಿಷಯಗಳು (ವ್ಯವಹಾರ ಶೇವಣಿ, ಟಿಡಿಎಸ್, ಇಂಪ್ರೆಸ್ಟ್ ಬ್ಯಾಲೆನ್ಸ್ ಇತ್ಯಾದಿ)** |
| **printercartridge@souharda.coop** | **ಪ್ರಿಂಟರ್ ಕಾಟ್ರೇಜ್ ಆರ್ಡರ್ ಮಾಡಲು.** |

16. ಇ-ಸ್ಟಾಂಪ್ ಕೇಂದ್ರಕ್ಕೆ ಅನುಮತಿ ಪಡೆದ ವಿಳಾಸದಲ್ಲಿಯೇ ಇ-ಸ್ಟಾಂಪ್ ವಿತರಿಸತಕ್ಕದ್ದು. ನಂತರದಲ್ಲಿ, ಇ-ಸ್ಟಾಂಪ್ ಕೇಂದ್ರವನ್ನು ಸ್ಥಳಾಂತರಿಸುವುದಿದ್ದಲ್ಲಿ ವಿಳಾಸ ಬದಲಾವಣೆಗಾಗಿ ಕಡ್ಡಾಯವಾಗಿ ಸಂಯುಕ್ತ ಸಹಕಾರಿಯ ಪೂರ್ವಾನುಮತಿ ಪಡೆಯುವುದು.

17. ಇ-ಸ್ಟಾಂಪ್ ವಿತರಿಸುವ ಸಮಯದಲ್ಲಿ ಅನಿರೀಕ್ಷಿತವಾಗಿ ತಾಂತ್ರಿಕ ದೋಷ ಅಥವಾ ಸರ್ವರ್ ಸಮಸ್ಯೆ ಕಾಣಿಸಿಕೊಂಡರೆ 30 ನಿಮಿಷಗಳಿಂದ 2 ಗಂಟೆಗಳ ಸಮಯ ನಿರೀಕ್ಷಿಸುವುದು. ನಂತರ ಕಂಪ್ಯೂಟರ್ ರೀಸ್ಟಾರ್ಟ್ ಮಾಡಿ ಇ-ಸ್ಟಾಂಪ್ ವಿತರಣೆ ಪುನರಾರಂಭಿಸುವುದು. ಸಮಸ್ಯೆ ಧೀರ್ಘಾವಧಿಯದಾಗಿದ್ದರೆ ಆ ದಿನ ಇ-ಸ್ಟಾಂಪ್ ವಿತರಿಸದಿರಲು ಕೋರಿದೆ.

18. ತಾಂತ್ರಿಕ ದೋಷ ಅಥವಾ ಸರ್ವರ್ ಸಮಸ್ಯೆ ಇದ್ದಲ್ಲಿ ಭಾರಿ ಮೊತ್ತದ ಇ-ಸ್ಟಾಂಪ್‌ಗಳನ್ನು ವಿತರಿಸಬಾರದು.

19. ಇ-ಸ್ಟಾಂಪ್ ವಿತರಿಸುವ ಕುರಿತು ಸಂಯುಕ್ತ ಸಹಕಾರಿಯಿಂದ ಇ-ಮೇಲ್/ಪತ್ರಗಳ ಮೂಲಕ ನೀಡುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು.

20. ಇ-ಸ್ಟಾಂಪ್ ಕೇಂದ್ರಗಳ ಹೊರ ಗುತ್ತಿಗೆ ನೀಡಿರುವುದು ಪರಿಶೀಲನೆಯ ವೇಳೆ ದೃಢಪಟ್ಟಲ್ಲಿ ತಮ್ಮ ಸಹಕಾರಿಗೆ ನೀಡಿರುವ ಇ-ಸ್ಟಾಂಪ್ ಕೇಂದ್ರದ ಅನುಮತಿಯನ್ನು ಸೂಚನಾ ರಹಿತವಾಗಿ ಹಿಂಪಡೆಯಲಾಗುವುದು.

# ಸಹಕಾರ ಹಾಗೂ ಬ್ಯಾಂಕಿಂಗ್ ಮಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸ ಎರಡನೇ ತಂಡ ಪ್ರಾರಂಭ

ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಸಹಕಾರ ಹಾಗೂ ಬ್ಯಾಂಕಿಂಗ್ ಮಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸ್ ಎರಡನೇ ತಂಡದ ಪ್ರವೇಶವು ಮುಕ್ತಾಯವಾಗಿದ್ದು ಸದರಿ ತಂಡದಲ್ಲಿ 265 ಜನರು ನೋಂದಣಿ ಮಾಡಿಕೊಂಡಿರುತ್ತಾರೆ. ಎರಡನೇ ತಂಡದ ಸಂಪರ್ಕ ವರ್ಗಗಳನ್ನು ಸಂಯುಕ್ತ ಸಹಕಾರಿಯು 5 ಕೇಂದ್ರಗಳಾಗಿ ವಿಂಗಡಿಸಲಾಗಿದೆ.

**1. ಬೆಂಗಳೂರು. 2. ಬೆಳಗಾವಿ 3. ರಾಯಚೂರು. 4. ಶಿವಮೊಗ್ಗ 5. ಮುಧೋಳ**

ಸಂಪರ್ಕ ವರ್ಗ ತರಬೇತಿ ಕೇಂದ್ರದ ಸ್ಥಳ :

| ಕ್ರ.ಸಂ | ಕೇಂದ್ರ | ಸಂಪರ್ಕ ವರ್ಗ ತರಗತಿ ಕೇಂದ್ರ | ಭಾಗವಹಿಸಬೇಕಾದ ಅಭ್ಯರ್ಥಿಗಳು |
|---|---|---|---|
| 1 | ಬೆಂಗಳೂರು | ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು – 560070 | ಶಿವಮೊಗ್ಗ ಕೇಂದ್ರ ಹೊರತುಪಡಿಸಿ ಉಳಿದ ಬೆಂಗಳೂರು, ಮೈಸೂರು ವಿಭಾಗದ ಅಭ್ಯರ್ಥಿಗಳು |
| 2 | ಬೆಳಗಾವಿ | ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಲೋಕಲ್ ಸೆಲ್ಫ್ ಗವರ್ನಮೆಂಟ್, ಭಾಗ್ಯನಗರ, ತಿಲಕವಾಡಿ, ಬೆಳಗಾವಿ – 590006 | ಬೆಳಗಾವಿ ವಿಭಾಗದ ಅಭ್ಯರ್ಥಿಗಳು |
| 3 | ರಾಯಚೂರು | ರಾಯಚೂರು ಕೃಷಿ ವಿಶ್ವವಿದ್ಯಾಲಯ, ವಿಶ್ವವಿದ್ಯಾಲಯ ಸಭಾಂಗಣ, ಲಿಂಗಸಗೂರು ರಸ್ತೆ, ಕಲಬುರಗಿ – 584104 | ಕಲಬುರಗಿ ವಿಭಾಗದ ಅಭ್ಯರ್ಥಿಗಳು |
| 4 | ಶಿವಮೊಗ್ಗ | ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಬಾಲರಾಜ ಅರಸು ರಸ್ತೆ, ಶಿವಮೊಗ್ಗ – 577201 | ಶಿವಮೊಗ್ಗ, ಚಿಕ್ಕಮಂಗಳೂರು, ಚಿತ್ರದುರ್ಗ, ದಾವಣಗೆರೆ ಜಿಲ್ಲೆಯ ಅಭ್ಯರ್ಥಿಗಳು |
| 5 | ಮುಧೋಳ | ವಿಜಯ ಸೌಹಾರ್ದ ಪತ್ತಿನ ಸಹಕಾರಿ ನಿ., ನಿರಾಣಿ ಕಟ್ಟಡ, ಮುಖ್ಯ ಪೋಸ್ಟ್‌ನ ಹಿಂದೆ, ಮುಧೋಳ, ಬಾಗಲಕೋಟ – 587313 | ಮುಧೋಳ ಹಾಗೂ ಬಾಗಲಕೋಟೆ ಜಿಲ್ಲೆಯ ಅಭ್ಯರ್ಥಿಗಳು |

ಈ ಕೋರ್ಸ್ ನೋಂದಾವಣಿ ಮಾಡಿಕೊಂಡಿರುವ ಎಲ್ಲಾ ಅಭ್ಯರ್ಥಿಗಳಿಗೆ ಫೆಬ್ರವರಿ ಎರಡನೇ ವಾರದೊಳಗಾಗಿ ಪ್ರವೇಶ ಪತ್ರ ಹಾಗೂ ಈ ಕೋರ್ಸ್‌ಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಕಳುಹಿಸಲಾಗುವುದು.

ಸಂಪರ್ಕ ವರ್ಗ ತರಗತಿಗಳ ವೇಳಾಪಟ್ಟಿ :

| ಸಂಪರ್ಕ ವರ್ಗ ತರಗತಿ | ಬೆಂಗಳೂರು ಕೇಂದ್ರ | ಬೆಳಗಾವಿ ಕೇಂದ್ರ | ರಾಯಚೂರು ಕೇಂದ್ರ | ಶಿವಮೊಗ್ಗ ಕೇಂದ್ರ | ಮುಧೋಳ ಕೇಂದ್ರ |
|---|---|---|---|---|---|
| **ಮೊದಲನೇ ಸಂಪರ್ಕ ವರ್ಗ ತರಗತಿ** | 15 & 16ನೇ ಫೆಬ್ರವರಿ 2020 | 15 & 16ನೇ ಫೆಬ್ರವರಿ 2020 | 22& 23ನೇ ಫೆಬ್ರವರಿ 2020 | 22& 23ನೇ ಫೆಬ್ರವರಿ 2020 | 15 & 16ನೇ ಫೆಬ್ರವರಿ 2020 |
| **ಎರಡನೇ ಸಂಪರ್ಕ ವರ್ಗ ತರಗತಿ** | 18 & 19ನೇ ಏಪ್ರಿಲ್ 2020 | 18 & 19ನೇ ಏಪ್ರಿಲ್ 2020 | 25 & 26ನೇ ಏಪ್ರಿಲ್ 2020 | 25 & 26ನೇ ಏಪ್ರಿಲ್ 2020 | 2 & 3ನೇ ಮೇ 2020 |
| **ಮೂರನೇ ಸಂಪರ್ಕ ವರ್ಗ ತರಗತಿ** | 20 & 21ನೇ ಜೂನ್ 2020 | 20 & 21ನೇ ಜೂನ್ 2020 | 13 & 14ನೇ ಜೂನ್ 2020 | 13 & 14ನೇ ಜೂನ್ 2020 | 6 & 7ನೇ ಜೂನ್ 2020 |

ಅಂತಿಮ ಪರೀಕ್ಷೆ ದಿನಗಳು :

- ಎಲ್ಲಾ ಕೇಂದ್ರಗಳಲ್ಲಿ ಏಕಕಾಲಕ್ಕೆ ದಿನಾಂಕ 26, 27 & 28 ಜೂನ್ 2020 ರಂದು ಪರೀಕ್ಷೆ ನಡೆಸಲಾಗುವುದು.
- ಹೆಚ್ಚಿನ ವಿವರಗಳಿಗೆ ಕೇಂದ್ರ ಕಛೇರಿಯ ತರಬೇತಿ ವಿಭಾಗದ ವಿ.ಜೆ. ಕಾರಕೂನ್ ಹಾಗೂ ಶ್ರೀಮತಿ ಕವಿತಾ ಮತ್ತು ಉಮೇಶ ಇವರನ್ನು ಸಂಪರ್ಕಿಸುವುದು.

ಸಂಪರ್ಕ ವರ್ಗ ಕೇಂದ್ರಗಳ ಸಂಯೋಜನಾಧಿಕಾರಿಗಳು :

**ಬೆಂಗಳೂರು ಕೇಂದ್ರ : ಡಾ. ಎಸ್.ಎ ಸಿದ್ದಾಂತಿ**
**ಬೆಳಗಾವಿ ಕೇಂದ್ರ : ಶ್ರೀಕಾಂತ ಬರುವೆ ಮೊ : 8884466706**
**ರಾಯಚೂರು ಕೇಂದ್ರ : ಆರ್. ರಘುನಂದನ್ ಮೊ : 8884466707**
**ಶಿವಮೊಗ್ಗ ಕೇಂದ್ರ : ನಾರಾಯಣ ಹೆಗಡೆ ಮೊ : 8884466704**
**ಮುಧೋಳ ಕೇಂದ್ರ : ವಿ.ಜೆ ಕಾರಕೂನ್ ಮೊ : 8884466710**

ಗಮನಿಸಿ: 1. ಅಧ್ಯಯನ ಸಾಹಿತ್ಯವನ್ನು ಮೊದಲನೇ ಸಂಪರ್ಕ ವರ್ಗದ ತರಬೇತಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ವಿತರಿಸಲಾಗುವುದು.
2. ಅಭ್ಯರ್ಥಿಗಳು ತಮ್ಮ ಪ್ರವೇಶ ಪತ್ರವನ್ನು ಸಂಪರ್ಕ ವರ್ಗ ತರಗತಿಯಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

# ರಾಜ್ಯದ ಸೌಹಾರ್ದ ಸಹಕಾರಿಗಳೂ ಸಹಕಾರಿ ಸಂಘಗಳೆಂದು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ಆದೇಶ

IN THE HIGH COURT OF KARNATAKA, BENGALURU

DATED THIS THE 16TH DAY OF JANUARY, 2020

BEFORE

THE HON'BLE MR. JUSTICE KRISHNA S.DIXIT

**WRIT PETITION NO. 48414 OF 2018 (T-IT)**
**C/W**
**WRIT PETITION NO. 14381 OF 2019 (T-IT)**

**IN W.P. NO. 48414/2018:**

BETWEEN:

M/S SWABHIMANI SOUHARDA
CREDIT CO OPERATIVE LTD
BEING A REGISTERED CO OPERATIVE
REGISTERED UNDER THE KARNATAKA
SOUHARDA SAHAKARI ACT 1997,
HAVING ITS REGISERED OFFICE AT NO.125,
DIAGONAL ROAD, V.V.PURAM,
BANGALORE-560004 AND
REPRESENTED BY ITS CEO
VINAYAK M SHENOY,
PAN: AAFAS 0181 E

... PETITIONER

(BY SRI. MALLA REDDY B V, ADVOCATE)

AND:

1. GOVERNMENT OF INDIA
   MINISTRY OF FINANCE,
   DEPARTMENT OF REVNUE,
   CENTRAL BOARD OF DIRECT TAXES (CBDT)
   INCOME TAX DEPARTMENT,
   ROOM NO.7008, AAYAKAR BHAVAN,
   VAISHALI GHAZIABAD, UP,
   PIN-201009
   REPRESENTED BY ITS DIRECTOR
   /PRINCIPAL SECRETARY

2. STATE OF KARNATAKA
   REPRESENTED BY ITS PRINCIPAL SECRETARY,
   DEPARTMENT OF CO OPERATION,
   M.S.BUILDING, DR.AMBEDKAR ROAD,
   BANGALORE-560001

HIGH COU[RT] O[F] KAR[NATAKA] BENGALURU

This Certified copy contains 12 Pages
And Copying charges of ₹ 36
Received

3. PRINCIPAL COMMISSIONER OF INCOME TAX
   C R BUILDING, NO.1 QUEENS ROAD,
   BENGALURU-560001

4. INCOME TAX OFFICER (ITO)WARD-5(2)(3)
   $3^{RD}$ FLOOR, ROOM NO.307, BMTC BUILDING,
   COMMERCIAL COMPLEX, 80 FT.ROAD,
   KORAMANGALA,
   BANGALORE-560095.

... RESPONDENTS

(BY SRI. JEEVAN J NEERALGI, ADVOCATE FOR R1, R3 & R4;
SRI. T K VEDAMURTHY, AGA FOR R2)

THIS WRIT PETITION IS FILED UNDER ARTICLES 226 AND 227 OF THE CONSTITUTION OF INDIA PRAYING TO QUASH THE NOTICE AND THE REASONING GIVEN BY R-4 FOR ISSUING THE NOTICE UNDER SECTION 148 OF THE INCOME TAX ACT 1961, DATED 30.03.2018 VIDE ANNX-D IN FAVOUR OF M/S SWABHIMANI SOUHARDA CREDIT CO-OPERATIVE LTD., BY THE R-4.

**IN W.P. NO. 14381/2019:**

BETWEEN:

KARNATAKA STATE SOUHARDA
FEDERAL CO-OPERATIVE LIMITED
BEING A REGISTERED CO-OPERATIVE
REGISTERED UNDER THE KARNATAKA SOUHARDA
SAHAKARI ACT 1997,
HAVING ITS REGISTERED OFFICE AT
NIRMANA BHAVANA, DR RAJKUMAR ROAD,
$1^{ST}$ BLOCK, RAJAJINAGAR,
BENGALURU-560010.
AND REPTD BY ITS MANAGING DIRECTOR.

...PETITIONER

(BY SRI. MALLA REDDY B V, ADVOCATE)

AND:

1. GOVERNMENT OF INDIA
   MINISTRY OF FINANCE,
   DEPARTMENT OF REVENUE
   CENTRAL BOARD OF DIRECT TAXES (CBDT)
   INCOME TAX DEPARTMENT,
   NORTH BLOCK, GATE NO.2,
   NEW DELHI-110001
   REPTD BY ITS DIRECTOR /PRINCIPAL SECRETARLY.

HIGH COURT OF KARNATAKA
BENGALURU

2. STATE OF KARNATAKA
REPTD BY ITS PRINCIPAL SECRETARY,
DEPARTMENT OF CO OPERATION,
M S BUILDING, DR AMBEDKAR ROAD,
BANGALORE-560 001.

3. PRINCIPAL CHIEF COMMISSIONER OF INCOME TAX
C R BUILDING NO.1, QUEENS ROAD,
BENGALURU-560001.

... RESPONDENTS

(BY SRI. C I SANMATHI, ADVOCATE FOR R1 & R3;
SRI. T K VEDAMURTHY, AGA FOR R2)

THIS WRIT PETITION IS FILED UNDER ARTICLES 226 AND 227 OF THE CONSTITUTION OF INDIA PRAYING TO DECALRE THAT THE KARNATAKA SOUHARDA SAHAKARI ACT 1997 (KARNATAKA ACT NO.17 OF 2000) FALLS WITHIN THE MEANING OF THE WORDS "ANY OTHER LAW FOR TIME BEING IN FORCE IN ANY STATE FOR THE REGISTRATION OF CO-OPERATIVE SOCIETIES" FOUND IN SECTION 2(19) OF INCOME TAX ACT 1961 (ACT 43 OF 1961). AND ETC.,

THESE PETITIONS HAVING BEEN HEARD AND RESERVED FOR ORDER, THIS DAY, THE COURT PRONOUNCED THE FOLLOWING:

**ORDER**

Petitioner in W.P.No.48414/2018 is a Credit Cooperative, registered under the Karnataka Souharda Sahakari Act, 1997 (hereafter "1997 Act"); petitioner in W.P.No.14381/2019 is registered as the State Federal Cooperative, as provided under Section 53 of the said Act; they have knocked at the doors of writ court in substance for a prayer that they are entitled to seek deduction in respect of their income in terms of the scheme envisaged under section 80P of the Income Tax Act, 1961 (hereafter "1961 Act"), on the premises that they too are a

In the above circumstances, these writ petitions succeed; a declaration is made to the effect that the entities registered under the Karnataka Souharda Sahakari Act, 1997 fit into the definition of “co-operative society” as enacted in sec.2(19) of the Income Tax Act, 1961 and therefore subject to all just exceptions, petitioners are entitled to stake their claim for the benefit of sec.80P of the said Act; a Writ of Certiorari issues quashing the impugned notice dated 30.03.2018 at Annexure-D in W.P.No.48414/2018; other legal consequences accordingly do follow.

HIGH COURT OF KARNATAKA BENGALURU

It is needless to mention that the other provisions of sec. 80P of 1961 Act and their effect on the claim of the petitioner-like-societies have been left to be addressed by the concerned authorities.

No costs.

**Sd/-**
**JUDGE**

**NOTE:** Full Judgement copy available in www.souharda.coop

## ಆದಾಯ ತೆರಿಗೆ ಸಮಾಚಾರ

## ಪಾವಗಡ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿಯ ಪರವಾಗಿ ಹೈಕೋರ್ಟ್ ತೀರ್ಪು

ದಿನಾಂಕ 16.01.2020ರಂದು ಕರ್ನಾಟಕ ರಾಜ್ಯ ಹೈಕೋರ್ಟ್ ಸೌಹಾರ್ದ ಸಹಕಾರಿಗಳನ್ನು ಸಂಘಗಳೆಂದು ಪರಿಗಣಿಸಿ ಆದಾಯ ತೆರಿಗೆ ಕಾಯ್ದೆಯ 80ಪಿ(2)ನಲ್ಲಿ ವಿನಾಯಿತಿಗೆ ಅರ್ಹರೆಂದು ನೀಡಿದ ತೀರ್ಪಿನ ಆಧಾರದಲ್ಲಿ ಪಾವಗಡ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿಯು ಸಹಕಾರಿ ಸಂಘವೆಂದು ಪರಿಗಣಿಸಿ ಆದಾಯ ತೆರಿಗೆ ಕಾಯ್ದೆಯ 80ಪಿ(2) ಅಡಿಯಲ್ಲಿ ವಿನಾಯಿತಿಗೆ ಅರ್ಹರೆಂದು ಕಮೀಷನರ್ ಆಫ್ ಇನ್‌ಕಂ ಟ್ಯಾಕ್ಸ್ ಇದು ಮೊದಲು ತೀರ್ಪು ನೀಡಿರುವುದು ಸ್ವಾಗತಾರ್ಹ. ಈ ತೀರ್ಪಿನಿಂದ ರಾಜ್ಯದ ಉಳಿದೆಲ್ಲ ಸೌಹಾರ್ದ ಸಹಕಾರಿಗಳಿಗೂ ಪ್ರಯೋಜನ ಪಡೆಯಲು ಸಾಧ್ಯವಾಗುತ್ತದೆ.

## ಉದ್ಘಾಟನೆ



**ಬೀದರ:** ದಿನಾಂಕ 05.01.2020ರಂದು ಬೀದರ ಪ್ರಗತಿ ಸೌಹಾರ್ದ ಸಹಕಾರಿ ನಿ., ಬೀದರ ಸದರಿ ಸಹಕಾರಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಇವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ಹಿರಿಯ ಸಹಕಾರಿಗಳು ಉಪಸ್ಥಿತರಿದ್ದರು.



**ರಾಯಚೂರು:** ದಿನಾಂಕ 20.01.2020 ರಂದು ರಾಯಚೂರ ಜಿಲ್ಲೆಯ ಸಿರವಾರ ನಗರದಲ್ಲಿ ಶ್ರೀ ವಿಜೇತ ಪತ್ತಿನ ಸೌಹಾರ್ದ ಸಹಕಾರಿ ನಿ. ಸಿರವಾರ ಸದರಿ ಸಹಕಾರಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಇವರು ನೇರವೇರಿಸಿದರು. ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್ ತಿಮ್ಮಯ್ಯ ಶೆಟ್ಟಿಯವರು ಮತ್ತು ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮದ ನಿರ್ದೇಶಕರಾದ ಶ್ರೀ ಎಸ್ ಎಸ್ ಪಾಟೀಲ್ ಮತ್ತು ಸಂಯುಕ್ತ ಸಹಕಾರಿಯ ಕಲಬುರ್ಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ್ ಹೆಚ್ ಉಪಸ್ಥಿತರಿದ್ದರು.



**ರಾಯಚೂರು:** ದಿನಾಂಕ 20.01.2020 ರಂದು ರಾಯಚೂರ ಜಿಲ್ಲೆಯ ಸಿರವಾರ ನಗರದಲ್ಲಿ ಶ್ರೀ ಲಕ್ಷ್ಮಿ ಪತ್ತಿನ ಸೌಹಾರ್ದ ಸಹಕಾರಿ ನಿ., ಮಾನ್ವಿ ಸದರಿ ಸಹಕಾರಿಯ ಸಿರವಾರ ಶಾಖೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಆರ್ ತಿಮ್ಮಯ್ಯ ಶೆಟ್ಟಿಯವರು ಮತ್ತು ಶ್ರೀ ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮದ ನಿರ್ದೇಶಕರಾದ ಶ್ರೀ ಎಸ್ ಎಸ್ ಪಾಟೀಲ್ ಮತ್ತು ಕಲಬುರ್ಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ್ ಹೆಚ್ ಉಪಸ್ಥಿತರಿದ್ದರು.



**ಉಡುಪಿ:** ದಿನಾಂಕ 12.01.2020 ರಂದು ಉಡುಪಿ ಜಿಲ್ಲೆಯ ಗಂಗೊಳ್ಳಿ ಟೌನ್ ಸೌಹಾರ್ದ ಸಹಕಾರಿ ನಿ.ಗಂಗೊಳ್ಳಿ.. ಇದರ ನೂತನ ಕಟ್ಟಡ ಮತ್ತು ಶತಮಾನೋತ್ಸವ ಕಾರ್ಯಕ್ರಮಗಳ ಉದ್ಘಾಟನೆ ಹಾಗು ಸಂಸ್ಥಾಪಕರ ಸ್ಮರಣೀಯ ದಿನೋತ್ಸವ ಕಾರ್ಯಕ್ರಮ ನಡೆಯಿತು. ನೂತನ ಕಟ್ಟಡದ ಉದ್ಘಾಟನೆಯನ್ನು ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಮಾನ್ಯ ಸಚಿವರು. ಕರ್ನಾಟಕ ಸರಕಾರ ಇವರು ನೇರವೇರಿಸಿದರು. ಸಹಕಾರಿಯ ಸಭಾಭವನ ಉದ್ಘಾಟನೆಯನ್ನು ಶ್ರೀ ಮಂಜುನಾಥ್ ಎಸ್.ಕೆ ಮಾನ್ಯ ನಿರ್ದೇಶಕರು ಸಂಯುಕ್ತ ಸಹಕಾರಿ, ಬೆಂಗಳೂರು ಇವರು ನೇರವೇರಿಸಿದರು. ಶತಮಾನೋತ್ಸವ ಕಾರ್ಯಕ್ರಮಗಳ ಉದ್ಘಾಟನೆಯನ್ನು ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ಇದರ ಶಾಸಕರಾದ ಶ್ರೀ ಡಿ.ವೇದವ್ಯಾಸ ಕಾಮತ್ ಇವರು ನೇರವೇರಿಸಿದರು.




**ಹುಕ್ಕೇರಿ:** ದಿನಾಂಕ 20.01.2020 ರಂದು ಶ್ರೀ ಬಸವೇಶ್ವರ ಅರ್ಬನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ. ಬೆಣಿವಾಡ ಇದರ ಮದಿಹಳ್ಳಿ ಶಾಖೆ ಕಛೇರಿಯ ನೂತನ ಕಟ್ಟಡ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ನಂತರ ಮಾತನಾಡಿ ಸಹಕಾರಿ ಸಂಸ್ಥೆಯಲ್ಲಿ ಜನರು ಸದಸ್ಯತ್ವ ಪಡೆದು ಅದರ ಪ್ರಯೋಜನ ಪಡೆಯಿರಿ ಮತ್ತು ಸಹಕಾರ ಕ್ಷೇತ್ರದಲ್ಲಿ ಹಲವು ಯೋಜನೆಗಳನ್ನು ರೂಪಿಸಿ ಕಾರ್ಯ ನಿರ್ವಹಣೆ ಮಾಡಿದರೆ ಸಹಕಾರಿ ಸಂಸ್ಥೆಗಳು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆವೆಂದು ತಿಳಿಸಿದರು.



**ಬೆಳಗಾವಿ:** ಶ್ರೀ ಕಟಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿಯ 2ನೇ ಶಾಖೆಯು ಗೋಕಾಕ ತಾಲ್ಲೂಕಿನ ಬೆಟಗೇರಿ ಗ್ರಾಮದಲ್ಲಿ ದಿನಾಂಕ 16.12.2019 ರಂದು ಕುರಬೇಟ ಕಾಂಪ್ಲೇಕ್ಸ್‌ನಲ್ಲಿ ಶ್ರೀ ಹರಗುರು ಮೂರ್ತಿ ಇವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಮ ಆ ನಿ ಪ್ರ ಶಿವಾನಂದ ಮಹಾಸ್ವಾಮಿಗಳು, ಸಾ॥ ಸೋಣಧೋಳಿ ಶ್ರೀ ಮ್ ಅ ನಿ ಪ್ರ ಶಿವಲಿಂಗ ಮುರಗರಾಜೇಂದ್ರ ಮಹಾಸ್ವಾಮಿಗಳು, ಸಾ॥ ಭಾಗೋಜಿಕೊಪ್ಪ ಪರಮಪೂಜ್ಯ ಗಣಪತಿ ಮಹಾರಾಜರು ಯರಗಟ್ಟಿ, ಪರಮಪೂಜ್ಯ ಸುರೇಶ ಮಾಹಾರಾಜರು ತವಸಿ, ಸಹಕಾರಿಯ ಅಧ್ಯಕ್ಷರಾದ ಅಭಿನವ ಸಿದ್ರಾಯಜ್ಜನವರ ಸಿದ್ರಾಯಜ್ಜನವರ ಮಠ ಕಟಕೋಳ ಹಾಗೂ ಊರಿನ ಸಮಸ್ತ ಗುರುಹಿರಿಯರು, ಗ್ರಾಹಕರು, ಸಿಬ್ಬಂದಿ ವರ್ಗದವರು ಹಾಗೂ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.




**ಶಿವಮೊಗ್ಗ:** ಶ್ರೀ ಶುಭಂ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಸದರಿ ಸಹಕಾರಿಯ ಉದ್ಘಾಟನಾ ಕಾರ್ಯಕ್ರಮವು ದಿನಾಂಕ 15–01–2020, ಬುಧವಾರ ಬೆಳಿಗ್ಗೆ 10–30ಕ್ಕೆ ಶ್ರೀ ಶುಭಂ ಸೌಹಾರ್ದ ಸಹಕಾರಿ ಕಛೇರಿ, ರಶ್ಮಿ ಆರ್ಕೇಡ್, ಜೈಲ್ ರಸ್ತೆ, ಶಿವಮೊಗ್ಗದಲ್ಲಿ ನಡೆಯಿತು. ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ಮತ್ತು ಉದ್ಘಾಟನೆಯನ್ನು ಶ್ರೀ ಬಸವ ಮರುಳಸಿದ್ದ ಸ್ವಾಮೀಜಿ ಚರಮೂರ್ತಿಗಳು, ಬಸವ ಕೇಂದ್ರ, ಶಿವಮೊಗ್ಗ ಇವರು ನೇರವೇರಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎ. ಆರ್. ಪ್ರಸನ್ನಕುಮಾರ್ ಹಾಗೂ ಶ್ರೀ ಎಂ. ಶಂಕರ್, ಅಧ್ಯಕ್ಷರು, ಹೊಯ್ಸಳ ಕರ್ನಾಟಕ ಪತ್ತಿನ ಸೌಹಾರ್ದ ಸಹಕಾರಿ (ನಿ.) ಶಿವಮೊಗ್ಗ ಇವರು ಭಾಗವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಮತ್ತು ಶುಭಂ ಶೈಕ್ಷಣಿಕ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಶಿವಮೊಗ್ಗ ಇದರ ಅಧ್ಯಕ್ಷರಾದ ಶ್ರೀ ಶ್ರೀಧರ್ ಹೆಗ್ಡೆ ಇವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರು, ಸದಸ್ಯರುಗಳು, ಮುಖ್ಯ ಕಾರ್ಯನಿರ್ವಾಹಕರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಕಲಬುರಗಿ:** ದಿನಾಂಕ 05.01.2020ರಂದು ಶ್ರೀ ಮಹಾಯೋಗಿನಿ ಮಾತಾ ಮಾಣಿಕೇಶ್ವರಿ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಇದರ ಉದ್ಘಾಟನೆಯನ್ನು ಶ್ರೀ ತಿಪ್ಪಣ್ಣಪ್ಪ ಕಮಕನೂರ, ಮಾನ್ಯ ವಿಧಾನ ಪರಿಷತ ಸದಸ್ಯರು, ನೇರವೇರಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಾಬು ಪಿ ಜಮಾದರ, ಸಹಕಾರಿಯ ಅಧ್ಯಕ್ಷರು, ಇವರು ವಹಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ಹಾಗೂ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ರಾಜಶೇಖರ ಹೆಚ್ ಇವರು ಉಪಸ್ಥಿತರಿದ್ದರು.



**ಕೈಕಂಬ:** ಸಫಲ ಸೌಹಾರ್ದ ಸಹಕಾರಿ ನಿ., ಇದರ ಉದ್ಘಾಟನಾ ಸಮಾರಂಭ ಹಾಗೂ ಪ್ರಥಮ ಸರ್ವ ಸದಸ್ಯರ ಸಭೆಯು ಗುರುಪುರ–ಕೈಕಂಬದ ಶ್ರೀ ರಾಮ್ ಸಭಾಂಗಣದಲ್ಲಿ ಮುಖ್ಯ ಪ್ರವರ್ತಕರಾದ ಶ್ರೀ ಎಸ್. ರಮೇಶ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಕೂಸಪ್ಪ ಸಪಳಿಗರು ಇವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಸಂಯೋಜಕರಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ಉಪಸ್ಥಿತರಿದ್ದರು.



**ಮೈಸೂರು:** ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇದರ ಉದ್ಘಾಟನೆ ಹಾಗೂ ಪ್ರಥಮ ಸರ್ವ ಸದಸ್ಯರ ಮಹಾಸಭೆಯ ಉದ್ಘಾಟನೆಯನ್ನು ಶ್ರೀ ನಾರಾಯಣ ರಾವ್, ಮುಖ್ಯ ಪ್ರವರ್ತಕರು ಇವರು ನೇರವೇರಿಸಿದರು ಈ ಸಂದರ್ಭದಲ್ಲಿ ಒಕ್ಕೂಟದ ಪ್ರವರ್ತಕರುಗಳು ಹಾಗೂ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು, ಮಂಡ್ಯ & ಚಾಮರಾಜನಗರ ಇವರು ಉಪಸ್ಥಿತರಿದ್ದರು.



**ಕೊಪ್ಪಳ:** ದಿನಾಂಕ 24/12/2019 ರಂದು ಕೊಪ್ಪಳ ತಾಲೂಕಿನ ಗಿಣಿಗೇರಿ ಗ್ರಾಮದಲ್ಲಿ ಶ್ರೀ ಧನಲಕ್ಷ್ಮೀ ಗಿಣಿಗೇರಾ ಪತ್ತಿನ ಸೌಹಾರ್ದ ಸಹಕಾರಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ್, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ. ಪತ್ತಾರ, ಶುಕಮುರಿ ಪತ್ತಿನ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಶರಣಪ್ಪ ಹ್ಯಾಟಿ ರವರು ನೇರವೇರಿಸಿದರು ಹಾಗೂ ಅವರನ್ನು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ರವಿ ಇಟಗಿ, ಮಾನ್ಯ ಉಪಾಧ್ಯಕ್ಷರು, ಆಡಳಿತ ಮಂಡಳಿಯ ನಿರ್ದೇಶಕರು, ಸದಸ್ಯರು ಮತ್ತು ಸಹಕಾರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಉತ್ತರ ಕನ್ನಡ:** ದಿನಾಂಕ 18.01.2020ರಂದು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಯು.ಕೆ ಸೌಹಾರ್ದ ಸಹಕಾರಿ ನಿ., ಯಲ್ಲಾಪುರ ಇದರ 9ನೇ ಮುಂಡಗೋಡ ಶಾಖೆಯ ಉದ್ಘಾಟನಾ ಸಮಾರಂಭದಲ್ಲಿ ಶ್ರೀಮತಿ ಸರಸ್ವತಿ. ಎನ್. ರವಿ. ಮಾನ್ಯ ನಿರ್ದೇಶಕರು. ಸಂಯುಕ್ತ ಸಹಕಾರಿ ಬೆಂಗಳೂರು ಇವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಯು.ಕೆ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಪ್ರಮೋದ ಹೆಗಡೆ ಇವರು ಶ್ರೀಮತಿ ಸರಸ್ವತಿ ಎನ್. ರವಿ. ಮಾನ್ಯ ನಿರ್ದೇಶಕರು. ಸಂಯುಕ್ತ ಸಹಕಾರಿ ಇವರನ್ನು ಸನ್ಮಾನಿಸಿದರು.

## ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಮಸ್ಕಿ ಸೇಲ್ಕೋ ಸೋಲಾರ್ ಕಂಪನಿಯೊಂದಿಗೆ ಒಪ್ಪಂದ




**ರಾಯಚೂರು:** ಹೈದ್ರಾಬಾದ್-ಕರ್ನಾಟಕದ ಪ್ರಮುಖ ಸಹಕಾರಿ ಸಂಸ್ಥೆಯಾದ ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಮಸ್ಕಿ, ತನ್ನ ಸದಸ್ಯರಿಗೆ ವಿವಿಧ ರೀತಿಯ ವಿನೂತನ ಮತ್ತು ಆಧುನಿಕ ತಂತ್ರಜ್ಞಾನದ ಸೇವೆಯನ್ನು ಒದಗಿಸುತ್ತಾ ಮುಂಚೂಣಿಯಲ್ಲಿ ನಿಲ್ಲುತ್ತದೆ. ದೇಶದಲ್ಲಿ ವಿದ್ಯುತ್ ಬಳಕೆಯ ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಜಲ ಮತ್ತು ಕಲ್ಲಿದ್ದಲಿನಿಂದ ಉತ್ಪಾದಿಸುವ ವಿದ್ಯುತ್ ಪ್ರಮಾಣ ನಿರೀಕ್ಷಿಸಿದಷ್ಟು ಉತ್ಪಾದನೆ ಆಗುತ್ತಿಲ್ಲ ಮತ್ತು ದುಬಾರಿ ಕೂಡ ಆಗುತ್ತಿದೆ. ಅದಕ್ಕೆ ಪರ್ಯಾಯ ಮಾರ್ಗಗಳನ್ನು ಹುಡುಕಿದಾಗ ಸಿಗುವ ಉತ್ತಮ ಪರಿಹಾರವೆಂದರೆ ಸೌರಶಕ್ತಿಯನ್ನು ಬಳಸುವುದು. ವಿದ್ಯುತ್ ಸಂಪರ್ಕ ಇರದ ಸ್ಥಳದಲ್ಲಿ, ವಿದ್ಯುತ್ ಸರಿಯಾಗಿ ಪೂರೈಕೆ ಮಾಡದ ಸ್ಥಳದಲ್ಲಿ ಸೌರಶಕ್ತಿಯನ್ನು ಬಳಸುವುದರಿಂದ ವೆಚ್ಚ ಕೂಡ ಕಡಿಮೆಯಾಗುತ್ತದೆ. ಅಲ್ಲದೇ ಪರಿಸರದ ಮೇಲೆ ಯಾವುದೇ ದುಷ್ಪರಿಣಾಮ ಆಗುವುದಿಲ್ಲ. ಇದರಿಂದ ಬಡವರು ಮತ್ತು ಮಧ್ಯಮ ವರ್ಗದವರ ಜೀವನ ಸುಧಾರಣೆ ಮತ್ತು ಸ್ವಾವಲಂಭಿ ಜೀವನ ನಡೆಸಲು ಅನುಕೂಲವಾಗುತ್ತದೆ. ಈ ಎಲ್ಲಾ ಅಂಶವನ್ನು ಗಮನದಲ್ಲಿಟ್ಟುಕೊಂಡು ಶ್ರೀ ಭ್ರಮರಾಂಬ ಸಹಕಾರಿಯು ದಿನಾಂಕ: 14.01.2020 ರಂದು ಸೇಲ್ಕೋ ಸೋಲಾರ್ ಲೈಟ್ ಪ್ರೈ.ಲಿ. ಬೆಂಗಳೂರು ಅವರೊಂದಿಗೆ ಸೋಲಾರ ಆಧಾರಿತ ವಸ್ತುಗಳಾದ ಲೈಟಿಂಗ್, ವಾಟರ್ ಹೀಟರ್ ಮತ್ತು ಜೀವನೋಪಾಯದ ವಸ್ತುಗಳಾದ ಹಿಟ್ಟಿನ ಗಿರಣಿ, ಖಾರ ಕುಟ್ಟುವ ಮಶೀನು, ಹೊಲಿಗೆ ಮಶೀನು, ಚೀಪ್ಸ್ ಮಾಡುವ ಮಶೀನು, ಝುರಾಕ್ಸ್ ಮಶೀನು, ಕುಲುಮೆ ಯಂತ್ರ, ಬೋರೆವೆಲ್ ಮೋಟಾರ್ ಮುಂತಾದ ಸುಮಾರು 60 ವಸ್ತುಗಳ ಮೇಲೆ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡಲು ಒಪ್ಪಂದ ಮಾಡಿಕೊಂಡಿತು. ಈ ಸಂದರ್ಭದಲ್ಲಿ ಗಚ್ಚಿನಮಠದ ಶ್ರೀ ವರರುದ್ರಮುನಿ ಶಿವಾಚಾರ್ಯರು, ಶ್ರೀ ಭ್ರಮರಾಂಬ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಪಂಪಣ್ಣ ಗುಂಡಳ್ಳಿ, ಮುಖ್ಯಕಾರ್ಯನಿರ್ವಾಹಕರಾದ ಶ್ರೀ ವೀರೇಶ ಹಿರೇಮಠ, ಸೆಲ್ಕೋ ಕಂಪನಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಮೋಹನ ಭಾಸ್ಕರ ಹೆಗಡೆ, ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಜಗದೀಶ ಪೈ ಮತ್ತು ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ



**ಚಿತ್ರದುರ್ಗ:** ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಚಿತ್ರದುರ್ಗ ಸದರಿ ಸಹಕಾರಿ ವತಿಯಿಂದ ಬ್ಯಾಂಕ್‌ನ ಕೇಂದ್ರ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಹಾಗೂ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನ ಅಧ್ಯಕ್ಷರಾದ ಶ್ರೀ ಎಸ್.ಆರ್. ಲಕ್ಷ್ಮೀಕಾಂತ ರೆಡ್ಡಿ, ಬ್ಯಾಂಕ್ ನ ನಿರ್ದೇಶಕರಾದ ಶ್ರೀ ಸುರೇಶ್ ರಾಜು, ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ಹಾಗೂ ಬ್ಯಾಂಕ್‌ನ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ತುಮಕೂರು:** ದಿನಾಂಕ 01.01.2020 ರಂದು ಎಸ್. ಎಸ್. ವಿ. ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಆಚರಿಸಲಾಯಿತು ಹಾಗೂ ಸಹಕಾರಿಯ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್. ಸಿದ್ದವೀರಯ್ಯ, ಉಪಾಧ್ಯಕ್ಷರಾದ ಶ್ರೀ ಶಿವನಂದಾ ಮೂರ್ತಿ, ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಬೆಂಗಳೂರು:** ದಿನಾಂಕ 01.01.2020 ರಂದು ಶ್ರೀ ಕಾಳಿಕಾಂಬ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಬೆಂಗಳೂರು:** ದಿನಾಂಕ 01.01.2020ರಂದು ಉದಯ ಸೌಹಾರ್ದ ಪತ್ತಿನ ಸಹಕಾರಿಯಲ್ಲಿ ಸಹಕಾರಿಯ ಅಧ್ಯಕ್ಷರು, ನಿರ್ದೇಶಕರುಗಳು, ಸಿಬ್ಬಂದಿ ವರ್ಗ ಮತ್ತು ಸದಸ್ಯರುಗಳ ಸಮ್ಮುಖದಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಆಚರಿಸಲಾಯಿತು.

ಸಹಕಾರಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರಾದ ಶ್ರೀ ಶ್ರೀಕಾಂತ. ಜಿ. ರವರು ಪ್ರಾಸ್ತಾವಿಕ ಭಾಷಣ ಮಾಡಿ ಸೌಹಾರ್ದ ಸಹಕಾರಿ ದಿನಾಚರಣೆಯ ಮಹತ್ವವನ್ನು ತಿಳಿಸಿದರು. ಸಹಕಾರಿಯ ನಿರ್ದೇಶಕರಾದ ಶ್ರೀ ಜಗದೀಶ್.ಎನ್. ರವರು ಸಹಕಾರಿಯ ಹುಟ್ಟು ಮತ್ತು ನಡೆದು ಬಂದ ದಾರಿ ವಿಶ್ವದಲ್ಲಿ, ಭಾರತದಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ಬೆಳೆದ ಬಗ್ಗೆ ಮತ್ತು ಸೌಹಾರ್ದ ಸಹಕಾರಿಯ ಚಳುವಳಿ ಮತ್ತು ಉಗಮವಾದ ಬಗ್ಗೆ ವಿವರಣೆ ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುಂಡುರಾವ್. ಬಿ.ಎಸ್.ರವರು ಮಾತನಾಡುತ್ತಾ, ಸೌಹಾರ್ದ ಸಹಕಾರಿಗಳು ತಮಗೆ ಸಿಕ್ಕಿರುವ ಸ್ವಾತಂತ್ರ್ಯವನ್ನು ಸ್ವೇಚ್ಛಾಚಾರವಾಗಿ ಬಳಸಿಕೊಳ್ಳದೇ ತಮ್ಮ ಜವಾಬ್ದಾರಿಯನ್ನು ಅರಿತು ಆಡಳಿತ ನಿರ್ವಹಿಸಬೇಕು ಎಂದು ತಿಳಿಸಿದರು. ನಿರ್ದೇಶಕರಾದ ಶ್ರೀಮತಿ ಶೋಭಾ ಶೇಷಾದ್ರಿಯವರು ಹಾಗೂ ಸಿಬ್ಬಂದಿಯವರಾದ ಶ್ರೀಮತಿ ಸುಶ್ಮ. ಸಿ. ರವರುಗಳು ಸೌಹಾರ್ದ ದಿನದ ಆಚರಣೆಯ ಬಗ್ಗೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.



**ರಾಯಚೂರು:** ಆರ್.ಡಿ.ಸೋನಿ ವಿವಿಧೋದ್ದೇಶ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ.


**ಬೆಳಗಾವಿ:** ದಿನಾಂಕ 01.01.2020ರಂದು ಶ್ರೀ ಬಾಲಗಣಪತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿಯ ದಿನಾಚರಣೆ ಧ್ವಜಾರೋಹಣವನ್ನು ಸಹಕಾರಿಗಳ ಸಹಾಯಕ ನಿಬಂಧಕರಾದ ಶ್ರೀ ಎಮ್. ಎಸ್. ಗೌಡಪ್ಪನವರು ಹಾಗೂ ಸಹಕಾರಿಯ ಅಧ್ಯಕ್ಷರಾದ ಶ್ರೀ ಶಿವಪ್ಪಾ ರಾಮಪ್ಪಾ ಚಿಕ್ಕೋಡಿ, ಸಹಕಾರಿಯ ಉಪಾಧ್ಯಕ್ಷರು ಶ್ರೀ ಶಿವಾನಂದ ಕ. ಗಲಗಲಿ ಇವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಅಡಳಿತ ಮಂಡಳಿ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



## ದೇಶದ ಆರ್ಥಿಕ ಅಭಿವೃದ್ಧಿಗೆ ಸಹಕಾರ ಕ್ಷೇತ್ರದ ಪಾತ್ರ ಮಹತ್ವದ್ದಾಗಿದೆ

**ಹುಣಸಮಾರನಹಳ್ಳಿ :** ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ವತಿಯಿಂದ 19ನೇ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ. ಸೌಹಾರ್ದ ಸಹಕಾರಿಗಳು ಗ್ರಾಮೀಣ ಪ್ರದೇಶಗಳ ಜನರ ಆರ್ಥಿಕ ವ್ಯವಸ್ಥೆಯ ತಾಯಿ ಬೇರಾಗಿದ್ದು, ಒಟ್ಟಾರೆ ದೇಶದ ಅಭಿವೃದ್ಧಿಯಲ್ಲಿ ಸಹಕಾರಿಗಳ ಪಾತ್ರ ಮಹತ್ವದ್ದಾಗಿರುತ್ತದೆ. ಸರ್ಕಾರದ ಸೌಲಭ್ಯಗಳನ್ನು ಜನರಿಗೆ ನೇರವಾಗಿ ತಲುಪಿಸುವಲ್ಲಿ ಸಹಕಾರಿಗಳು ಮಧ್ಯವರ್ತಿಗಳಾಗಿ ಕಾರ್ಯನಿರ್ವಹಿಸುತ್ತಿದ್ದು ಸಹಕಾರಿ ಚಳುವಳಿಯನ್ನು ಉಳಿಸಿ ಬೆಳೆಸಿಕೊಂಡು ಹೋಗುವ ಮಹತ್ವದ ಹೊಣೆಗಾರಿಕೆ ಸೌಹಾರ್ದಗಳ ಮೇಲಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಸರಕಾರಗಳ ಹಸ್ತಕ್ಷೇಪದಿಂದ ಸೌಹಾರ್ದಗಳ ವಿಸ್ತರಣೆ ಮತ್ತು ಪ್ರಗತಿಯಲ್ಲಿ ಎಲ್ಲೋ ಒಂದು ಕಡೆ ಕುಂಠಿತವಾಗುತ್ತಿದೆ ಎಂದು ಸಹಕಾರಿಯ ಅಧ್ಯಕ್ಷ ಬಿ. ಪುಟ್ಟಶಾಮಪ್ಪ ತಿಳಿಸಿದರು.

ಗ್ರಾಮೀಣ ಭಾಗದ ಜನರ ಬೇಡಿಕೆಗಳನ್ನು ಪೂರೈಸುವ ಸಹಕಾರಿಗಳು ವಾಣಿಜ್ಯ ಬ್ಯಾಂಕುಗಳೊಂದಿಗೆ ಪೈಪೋಟಿಯಿಂದ ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಪ್ರತಿಯೊಂದು ಸಹಕಾರಿ ಸಂಘದ ಆಡಳಿತ ಮಂಡಳಿ ಸದಸ್ಯರು ಸಹಕಾರಿಯ ಕಾಯ್ದೆ ಕಾನೂನಿನ ಪೂರ್ಣ ಪರಿಜ್ಞಾನ ಹೊಂದಿ ಗ್ರಾಹಕರ ಸೇವೆ ಮಾಡಬೇಕು ಎಂದು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಹಿರಿಯ ಸದಸ್ಯ ಹಾಗೂ ನಿವೃತ್ತ ಶಿಕ್ಷಕ ಹೆಚ್.ಆರ್.ಶಿವಯ್ಯ ಅಭಿಪ್ರಾಯಪಟ್ಟರು. ಇದೇ ಸಂದರ್ಭದಲ್ಲಿ ಸಹಕಾರಿ ವತಿಯಿಂದ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಉಪಾಧ್ಯಕ್ಷ ವೀರೇಶ್, ನಿರ್ದೇಶಕರಾದ ಬಿ.ಆರ್.ಬೈರೇಗೌಡ, ಆರ್.ರವಿಚಂದ್ರ, ಶ್ರೀಮತಿ ಲತಾರಾಣಿ, ಎ.ಎಂ.ಸುಜಾತ, ಎಂ.ಸತೀಶ್ ಮತ್ತು ಚಂದ್ರಮೋಹನ್ ಹಾಜರಿದ್ದರು.



**ಚಿಕ್ಕಬಳ್ಳಾಪುರ:** ಶಿರಡಿ ಸೌಹಾರ್ದ ಸಹಕಾರಿ ನಿ., ಸದರಿ ಸಹಕಾರಿಯ ವತಿಯಿಂದ ದಿನಾಂಕ 01.01.2020ರಂದು ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಮತ್ತು ಹೊಸ ವರ್ಷದ ಆಚರಣೆಯನ್ನು ಸಹಕಾರಿಯ ಅಧ್ಯಕ್ಷರು, ಆಡಳಿತ ಮಂಡಲಿ ಸದಸ್ಯರು, ಮುಖ್ಯ ಕಾರ್ಯನಿರ್ವಾಹಕರು, ಹಾಗೂ ಸಹಕಾರಿ ಬಂಧುಗಳು ಸೇರಿ ದೀಪ ಬೆಳಗಿಸಿ ಸಹಕಾರಿಯಲ್ಲಿ ಧ್ವಜರೋಹಣ ಮಾಡಿ ಆಚರಿಸಲಾಯಿತು ಮತ್ತು ಸಹಕಾರಿಯ ಹೊಸ ವರ್ಷದ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಪಾವಗಡ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಹಿರಿಯ ವ್ಯವಸ್ಥಾಪಕರಾದ ಶ್ರೀ ಕೇಶವಮೂರ್ತಿ ಮತ್ತು ಶ್ರೀ ಬಸವರಾಜು, ಉಪ ನೋಂದಾಣಾಧಿಕಾರಿಗಳು, ಚಿಕ್ಕಬಳ್ಳಾಪುರ ಹಾಗೂ ಗಣಪತಿ ಸೌಹಾರ್ದ ಸಹಕಾರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಬೆಳಗಾವಿ:** ದಿನಾಂಕ; 01–01–2020 ರಂದು ಶ್ರೀ ಬಸವೇಶ್ವರ ಅರ್ಬನ್ ಕ್ರೇಡಿಟ್ ಸೌಹಾರ್ದ ಸಹಕಾರಿ ನಿ., ಕಲ್ಲೋಳಿ ಸಹಕಾರಿಯಲ್ಲಿ ಸೌಹಾರ್ದ ಸಹಕಾರ ದಿನಾಚರಣೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಾಳಪ್ಪ ಬ ಬೆಳಕೂಡ ಧ್ವಜಾರೋಹಣ ಮಾಡುವ ಮೂಲಕ ಆಚರಿಸಲಾಯಿತು. ವ್ಯವಸ್ಥಾಪಕ ಹಣಮಂತ ಸ ಖಾನಗೌಡ್ರ ಹಾಗು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಘಟಪ್ರಭ:** ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು.



**ಧಾರವಾಡ:** ದಿ. ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ., ಧಾರವಾಡ ಸಹಕಾರಿಯ ದಿನಾಂಕ 01.01.2020 ರಂದು ಸಹಕಾರಿಯ ಪ್ರಧಾನ ಕಛೇರಿ ಆವರಣದಲ್ಲಿ ಸೌಹಾರ್ದ ಸಹಕಾರಿಗಳ ದಿನಾಚರಣೆಯನ್ನು ಸಹಕಾರಿ ಸಪ್ತ ವರ್ಣದ ಧ್ವಜಾರೋಹಣದೊಂದಿಗೆ ಆಚರಿಸಲಾಯಿತು. ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಗುರುಪಾದಪ್ಪ ಪಗೆಯವರು ಧ್ವಜಾರೋಹಣ ನೆರವೇರಿಸಿದರು, ಉಪಾಧ್ಯಕ್ಷರಾದ ಶ್ರೀ ಚನ್ನಬಸವಯ್ಯ ಹಿರೇಮಠ, ಸಹಕಾರಿಯ ನಿರ್ದೇಶಕರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಚಂದ್ರಕಾಂತ ಪಡಚಣ್ಣನವರ ಹಾಗೂ ಇನ್ನುಳಿದಂತೆ ನಿರ್ದೇಶಕರು, ರಾ.ಸ್ವ.ಸಂಘದ ಹಿರಿಯರು, ಸಿಬ್ಬಂದಿಗಳು ಭಾಗವಹಿಸಿದ್ದರು.

## ಕ್ಯಾಲೆಂಡರ್ ಬಿಡುಗಡೆ



**ಬೆಂಗಳೂರು :** ದಿನಾಂಕ 12.01.2020 ರಂದು ಜನನಿಧಿ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸದರಿ ಸಹಕಾರಿಯ ಗ್ರಾಹಕರ ಮತ್ತು ಸದಸ್ಯರ ಸ್ನೇಹ ಸಂಪರ್ಕ ಸಭೆಯು ಹಿಮಾದ್ರಿ ಪಾರ್ಟಿ ಹಾಲ್, ಹೆಸರುಘಟ್ಟ ಮುಖ್ಯ ರಸ್ತೆ, ಬೆಂಗಳೂರಿನಲ್ಲಿ ನಡೆಯಿತು ಹಾಗೂ ಸಹಕಾರಿಯ 2020ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಸದರಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಂಜಪ್ಪ ಹೆಚ್.ಎಲ್, ಉಪಾಧ್ಯಕ್ಷರಾದ ಶ್ರೀ ನಾಗರಾಜು ಆರ್. ಕರ್ನಾಟಕ ರಾಜ್ಯ ಕೋ-ಆಪರೇಟಿವ್ ಸೋಸೈಟೀಸ್ ಅಸೋಸಿಯೇಶನ್ ನ ಅಧ್ಯಕ್ಷರಾದ ಶ್ರೀ ವೈ. ಕುಮಾರ್, ಸಹಕಾರಿಯ ನಿರ್ದೇಶಕರುಗಳು, ಸಲಹಾ ಸಮಿತಿ ಸದಸ್ಯರು, ಸಹಕಾರಿಯ ಸದಸ್ಯರು, ಗ್ರಾಹಕರು ಹಾಗೂ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

## ತರಬೇತಿ ಕಾರ್ಯಕ್ರಮ



**ಮೈಸೂರು:** ಮೈಸೂರು ಜಿಲ್ಲಾ ಛಾಯಾ ಸ್ನೇಹ ಸೌಹಾರ್ದ ಸಹಕಾರಿ ನಿ, ಸದರಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರಿಗೆ ಮತ್ತು ಸಿಬ್ಬಂದಿ ವರ್ಗಕ್ಕೆ ಒಂದು ದಿನದ ತರಬೇತಿ ಕಾರ್ಯಗಾರವನ್ನು ದಿನಾಂಕ 24-01-2020 ಶುಕ್ರವಾರದಂದು ಮೈಸೂರಿನ ಹೋಟೆಲ್ ಲಿ ರುಚಿ ಯಲ್ಲಿ ನಡೆಯಿತು. ತರಬೇತಿ ಕಾರ್ಯಗಾರದ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಶಿವಕುಮಾರ್ ಬಿರಾದರ್, ಮೈಸೂರು ಪ್ರಾಂತೀಯ ವ್ಯವಸ್ಥಾಪಕರು, ಶ್ರೀ ಬಿ.ಎನ್. ಚಂದ್ರಶೇಖರ್, ಲೆಕ್ಕಪರಿಶೋಧಕರು, ಶ್ರೀ ಡಿ.ವಿ. ಶ್ರೀನಿವಾಸ, ಇವರುಗಳು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ. ಎಸ್. ರಾಜೇಂದ್ರಕುಮಾರ್, ಉಪಾಧ್ಯಕ್ಷರಾದ ಶ್ರೀ ಸಿ. ಅಭಿನಂದನ್, ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಧಾರವಾಡ :** ಧಾರವಾಡ ವಕೀಲರ ಸೌಹಾರ್ದ ಸಹಕಾರಿಯ 2020ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಸಮಾರಂಭ ಧಾರವಾಡ ವಕೀಲರ ಸಂಘದಲ್ಲಿ ಜರುಗಿತು. ಧಾರವಾಡ ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರಾದ ಶ್ರೀ ಈಶಪ್ಪ ಕೆ ಭೂತೆರವರು ಕ್ಯಾಲೆಂಡರ್ ಬಿಡುಗಡೆ ಮಾಡಿದರು.

ವೇದಿಕೆಯಲ್ಲಿ ಧಾರವಾಡ ಹೈಕೋರ್ಟ್ ವಕೀಲರ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್ ಪಾಟೀಲ ಹಾಗೂ ಧಾರವಾಡ ವಕೀಲರ ಸಂಘದ ಅಧ್ಯಕ್ಷರಾದ ಶ್ರೀ ಬಿ ಎಸ್ ಗೊಡಸೆ ಮತ್ತು ಧಾರವಾಡ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಎನ್ ಆರ್ ಮಟ್ಟಿ ಮತ್ತು ಸಹಕಾರಿಯ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಸದಸ್ಯರಾದ ಶ್ರೀ ವ್ಹಿ ಡಿ ಕಾಮರಡ್ಡಿ ಉಪಸ್ಥಿತರಿದ್ದರು.

## 7ನೇ ವಾರ್ಷಿಕೋತ್ಸವ



ಚಿಕ್ಕೋಡಿ: ದಿನಾಂಕ 16.01.2020 ರಂದು ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 7ನೇ ವಾರ್ಷಿಕೋತ್ಸವ ಸಮಾರಂಭದ ಉದ್ಘಾಟನೆಯನ್ನು ಸಹಕಾರಿಯ ನೂತನ ಪ್ರಧಾನ ಕಛೇರಿಯಲ್ಲಿ ಸಹಕಾರಿಯ ನಿರ್ದೇಶಕರಾದ ಶ್ರೀ ಸಂಜಯ ಗೀಡವೀರ ಇವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಮಾರ್ಗದರ್ಶಕರು ಹಾಗೂ ವಿಧಾನ ಪರಿಷತ್ತಿನ ಆಡಳಿತ ಪಕ್ಷದ ಮುಖ್ಯ ಸಚೇತಕರಾದ ಸನ್ಮಾನ್ಯಶ್ರೀ ಮಹಾಂತೇಶ ಎಮ್ ಕವಟಗಿಮಠ ಇವರನ್ನು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಹಾಗೂ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಎಮ್. ಕವಟಗಿಮಠ ಹಾಗೂ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಷಡಕ್ಷರಿ ಬಿ ಮೂಗೇರಿ ಹಾಗೂ ಎಲ್ಲಾ ಸಂಚಾಲಕ ಮಂಡಳಿ ನಿರ್ದೇಶಕರು, ಸಲಹಾ ಸಮಿತಿ ಸದಸ್ಯರು, ಸರ್ವ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ದಶಮಾನೋತ್ಸವ ಕಾರ್ಯಕ್ರಮ



**ಚಿತ್ರದುರ್ಗ:** ಆದರ್ಶ ಸೌಹಾರ್ದ ಸಹಕಾರಿಯ ದಶಮಾನೋತ್ಸವ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್.ಆರ್ ಲಕ್ಷ್ಮೀಕಾಂತ ರೆಡ್ಡಿ ಇವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಡಿ.ಆರ್ ತಿಪ್ಪೇಸ್ವಾಮಿ, ಸದಸ್ಯರು, ಗ್ರಾಹಕರು, ಠೇವಣಿದಾರರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಸದರಿ ಸಹಕಾರಿಯು ಸದಸ್ಯರಿಗೆ ಶೇ.20% ಲಾಭಾಂಶವನ್ನು ಕಳೆದ 8 ವರ್ಷಗಳಿಂದ ನೀಡುತ್ತಿದೆ. ದಶಮಾನೋತ್ಸವದ ಕಾರ್ಯಕ್ರಮದ ಅಂಗವಾಗಿ ಉಚಿತ ನೇತ್ರ ತಪಾಸಣೆ ಹಾಗೂ ಶಸ್ತ್ರ ಚಿಕಿತ್ಸಾ ಶಿಬಿರವನ್ನು ಶಿವಮೊಗ್ಗದ ಶಂಕರ್ ಕಣ್ಣಿನ ಆಸ್ಪತ್ರೆಯ ಸಹಯೋಗದಲ್ಲಿ ನಡೆಯಿತು. ಸಹಕಾರಿಯ ಈಗಾಗಲೇ ಸ್ವಂತ ನಿವೇಶನವನ್ನು ಹೊಂದಿದ್ದು ಮುಂದಿನ ದಿನಗಳಲ್ಲಿ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಎಲ್ಲರ ಸಹಕಾರ ಕೋರಿದರು. ಕಾರ್ಯಕ್ರಮದಲ್ಲಿ ಸರ್ಕಾರಿ ನೌಕರರ ಸಂಘ ಉಪಾಧ್ಯಕ್ಷ ಎಸ್ ಶಿವಮೂರ್ತಿ ಹಾಗೂ ಸಹಕಾರಿ ಉಪಾಧ್ಯಕ್ಷ ಎನ್. ಚಂದ್ರಶೇಖರ ಉಪಸ್ಥಿತರಿದ್ದರು.

## ಆಯ್ಕೆ



**ತುಮಕೂರು:** ತುಮಕೂರು ಡಿಸಿಸಿ ಬ್ಯಾಂಕಿನ ನಿರ್ದೇಶಕರಾದ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರಾದ ಶ್ರೀ ಆರ್. ರಾಜೇಂದ್ರ ಇವರು ಭಾರತದ ಪ್ರತಿಷ್ಠಿತ ಸಹಕಾರಿ ಸಂಸ್ಥೆಯಾದ ಕೃಷಿಕ್ ಭಾರತಿ ಕೋ-ಆಪರೇಟಿವ್ (KRIBHCO) ಸಂಸ್ಥೆಯ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ಅಧ್ಯಕ್ಷರು - ಉಪಾಧ್ಯಕ್ಷರ ಆಯ್ಕೆ

### ಪರಿಶ್ರಮ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬಾಗಲಕೋಟ.



ಶ್ರೀ ವೀರಭದ್ರಯ್ಯ ರುದ್ರಯ್ಯ ಹಿರೇಮಠ
ಅಧ್ಯಕ್ಷರು



ಶ್ರೀ ಲಿಂಗರಾಜ ಸಕರಪ್ಪ ಚಿಕ್ಕದೇಸಾಯಿ
ಉಪಾಧ್ಯಕ್ಷರು

### ಶಿರಾ ವಾಸವಿ ಸೌಹಾರ್ದ ಪತ್ತಿನ ಸಹಕಾರಿ ನಿ., ಶಿರಾ.



ಶ್ರೀ ಮಂಜುನಾಥ ಬಿ.
ಅಧ್ಯಕ್ಷರು



ಶ್ರೀ ಸುಬ್ಬರಾಜು ವಿ.ಎಸ್
ಉಪಾಧ್ಯಕ್ಷರು

### ಸಮೃದ್ಧಿ ಭಾರತೀನಗರ ಸೌಹಾರ್ದ ಪತ್ತಿನ ಸಹಕಾರಿ ನಿ., ಮಂಡ್ಯ




ಶ್ರೀ ಸಿದ್ದಲಿಂಗಯ್ಯ ಎಸ್
ಅಧ್ಯಕ್ಷರು



ಶ್ರೀ ಪ್ರಸಾದ್ ಕೆ.ಎನ್
ಉಪಾಧ್ಯಕ್ಷರು

# ಮೊಟ್ಟ ಮೊದಲ ಬಾರಿಗೆ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಶಾರದ ಸೌಹಾರ್ದ ಸಹಕಾರಿಯಿಂದ ಕೋಲ್ಡ್ ಸ್ಟೋರೇಜ್ ಪ್ರಾರಂಭ

## ರೈತರ ಸಂಕಷ್ಟದ ಸಂದರ್ಭಲ್ಲಿ ಶಾರದ ಸೌಹಾರ್ದ ಕೋಲ್ಡ್ ಸ್ಟೋರೇಜ್ ನಿರ್ಮಿಸಿರುವುದು ಸ್ತುತ್ಯಾರ್ಹ : ಡಾ. ಜಿ. ಭೀಮೇಶ್ವರ ಜೋಷಿ




ಶಿವಮೊಗ್ಗ ಜಿಲ್ಲೆ ಹಾಗೂ ಅಕ್ಕಪಕ್ಕದ ಜಿಲ್ಲೆಗಳ ರೈತರಿಗೆ ಅನುಕೂಲ ಕಲ್ಪಿಸಬೇಕೆಂಬ ಸುದುದ್ದೇಶದಿಂದ ಶ್ರೀ ಶಾರದ ವಿವಿಧೋದ್ದೇಶ ಸೌಹಾರ್ದ ಸಹಕಾರಿಯು ಶಿಥಲೀಕರಣ ಘಟಕ (ಕೋಲ್ಡ್ ಸ್ಟೋರೇಜ್) ಸ್ಥಾಪನೆ ಮಾಡಿರುವುದು ಶ್ಲಾಘನೀಯ ಕಾರ್ಯ ಎಂದು ಶ್ರೀಕ್ಷೇತ್ರ ಹೊರನಾಡು ಅನ್ನಪೂರ್ಣೇಶ್ವರಿ ದೇವಾಲಯದ ಧರ್ಮದರ್ಶಿ ಡಾ. ಜಿ. ಭೀಮೇಶ್ವರ ಜೋಷಿ ಹೇಳಿದರು. ಶಾರದ ವಿವಿಧೋದ್ದೇಶ ಸೌಹಾರ್ದ ಸಹಕಾರಿ ವತಿಯಿಂದ ಹೊಸನಗರ ತಾಲ್ಲೂಕು ರಿಪ್ಪನ್‌ಪೇಟೆ ಎಪಿಎಂಸಿ ಆವರಣದಲ್ಲಿ 10 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಲಾಗಿರುವ ಶ್ರೀ ಶಾರದ ಸೌಹಾರ್ದ ಕೋಲ್ಡ್ ಸ್ಟೋರೇಜ್ (ಶೀತಲೀಕರಣ ಘಟಕ) ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಸೋಲಾರ್ ಕಾಮಗಾರಿ ಉದ್ಘಾಟನೆ ನೆರವೇರಿಸಿ ಮಾತನಾಡಿದ ಸಂಸದ ಬಿ.ವೈ. ರಾಘವೇಂದ್ರ, ಶೀಥಲೀಕರಣ ಘಟಕ ನಿರ್ಮಾಣ ಮಾಡುವ ಮೂಲಕ ರೈತರಿಗೆ ಆಶಾಕಿರಣವಾಗುವ ಯೋಜನೆಯನ್ನು ಶಾರದ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ಕೈಗೊಂಡಿದೆ. ಬೆಳೆದ ಬೆಳೆಯನ್ನು ಕಡಿಮೆ ದರಕ್ಕೆ ಮಧ್ಯವರ್ತಿಗಳಿಗೆ ನೀಡದೆ, ಬೆಳೆಯನ್ನು ಘಟಕದಲ್ಲಿ ಶೇಖರಿಸಿಟ್ಟುಕೊಂಡು ಮಾರುಕಟ್ಟೆಯಲ್ಲಿ ಉತ್ತಮ ಧಾರಣೆ ಬಂದ ಸಂದರ್ಭದಲ್ಲಿ ಮಾರಾಟ ಮಾಡಿ ಲಾಭ ಗಳಿಸಬೇಕೆಂದು ಸಲಹೆ ನೀಡಿದರು.

ಸಾಗರ ಕ್ಷೇತ್ರ ಶಾಸಕ ಹರತಾಳು ಹಾಲಪ್ಪ ಮಾತನಾಡಿ, ಅಡಕೆ ಬೆಳೆಗಾರರ ಬಹುದಿನದ ಬೇಡಿಕೆಯಂತೆ ಶಾಸಕ ಅರಗ ಜ್ಞಾನೇಂದ್ರ ನೇತೃತ್ವದಲ್ಲಿ ಟಾಸ್ಕ್‌ಫೋರ್ಸ್ ರಚನೆಯಾಗಿದೆ. ಹಾಗೆಯೇ ಹೊಸನಗರ ತಾಲೂಕು ನಾಗೋಡಿಯಲ್ಲಿ ಮಂಕಿಪಾರ್ಕ್ ನಿರ್ಮಾಣ ಪ್ರಯತ್ನ ನಡೆಸಲಾಗಿದೆ. ರಾಜ್ಯ ಸರ್ಕಾರ ರೈತರ ಸಮಸ್ಯೆಗಳಿಗೆ ಸೂಕ್ತ ರೀತಿಯಲ್ಲಿ ಸ್ಪಂದನೆ ನೀಡುತ್ತಿದೆ ಎಂದರು.

ತೀರ್ಥಹಳ್ಳಿ ಕ್ಷೇತ್ರ ಶಾಸಕ ಆರಗ ಜ್ಞಾನೇಂದ್ರ ಮಾತನಾಡಿ, ರಾಜ-ಕಾರಣವನ್ನು ಮೀರಿ ದೇಶದ ಪ್ರಗತಿ ಕುರಿತು ಚಿಂತನೆ ನಡೆಸಬೇಕು. ಇಲ್ಲವಾದಲ್ಲಿ ದೇಶಕ್ಕೆ ಅಪಾಯ ಉಂಟಾಗಲಿದೆ. ರೆಸಿಪ್ ಒಪ್ಪಂದಕ್ಕೆ ಪ್ರಧಾನಿ ನರೇಂದ್ರ ಮೋದಿ ಸಹಿ ಹಾಕದೆ ರೈತರ ಪರ ನಿಲುವು ಪ್ರಕಟಿಸಿದ್ದಾರೆ ಎಂದರು.

ಶಾರದ ವಿವಿದೋದ್ದೇಶ ಸೌಹಾರ್ದ ಸಹಕಾರಿ ಅಧ್ಯಕ್ಷ ಹೆಚ್.ಎಸ್. ಶಿವಶಂಕರ ಅಧ್ಯಕ್ಷತೆ ವಹಿಸಿ ಸೌಹಾರ್ದ ಸಹಕಾರಿ ರೈತರ ಪರವಾಗಿ ಕೆಲಸ ಮಾಡುತ್ತಿದೆ ಎನ್ನುವುದು ನಮ್ಮ ಹೆಮ್ಮೆ. ಇದೇ ರೀತಿ ಇದೀಗ ಐದನೇ ಶಾಖೆಯಾಗಿ ರಿಪ್ಪನ್‌ಪೇಟೆಯಲ್ಲಿ ಕಾಲಿಟ್ಟಿದ್ದು, ಸಹಕಾರಿಯೊಂದಕ್ಕೆ ದೊಡ್ಡ ಸವಾಲು ಎನ್ನುವಂತಹ 10 ಕೋಟಿ ರು. ವೆಚ್ಚದಲ್ಲಿ ಯೋಜನೆ ರೂಪಿಸಿದ್ದೇವೆ. ರೈತರಿಗೆ ಇದು ಉಪಯೋಗವಾಗುತ್ತದೆ ಎಂಬ ನಂಬಿಕೆ ನಮ್ಮದು ಎಂದರು. ಇದೇ ಸಂದರ್ಭದಲ್ಲಿ ಶ್ರೀಕ್ಷೇತ್ರ ಹೊರನಾಡು ಅನ್ನಪೂರ್ಣೇಶ್ವರಿ ದೇವಾಲಯದ ಧರ್ಮದರ್ಶಿ ಡಾ. ಜಿ. ಭೀಮೇಶ್ವರ ಜೋಷಿ ಅವರನ್ನು ಶಾರದಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ವತಿಯಿಂದ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರಿ ಪ್ರಸನ್ನಕುಮಾರ್ ಎ ಆರ್, ಮಾಮ್‌ಕೋಸ್ ಉಪಾಧ್ಯಕ್ಷ ವೈ.ಎಸ್.ಸುಬ್ರಹ್ಮಣ್ಯ, ಕರ್ನಾಟಕ ಬ್ಯಾಂಕ್‌ನ ಜಿಜಿಎಂ ವೈ. ವಿ. ಬಾಲಚಂದ್ರ, ಹೊಸನಗರ ಎಪಿಎಂಸಿ ಅಧ್ಯಕ್ಷ ಹೆಚ್.ವಿ. ಈಶ್ವರಪ್ಪಗೌಡ, ಸಹಕಾರಿಯ ಸಿ.ಇ.ಓ ಮಂಜುನಾಥ ಶರ್ಮ, ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಚನ್ನವೀರಪ್ಪ ಮತ್ತಿತರರು ಉಪಸ್ಥಿತರಿದ್ದರು. ಸೌಹಾರ್ದ ಸಹಕಾರಿ ನಿರ್ದೇಶಕ ಜಿ.ಕೆ. ರಮಾಕಾಂತ್‌ಸ್ವಾಗತಿಸಿದರು, ಗೋಪಾಲ್ ಯಡಗೆರೆ ಪ್ರಾಸ್ತಾವಿಕವಾಗಿ ಮಾತನಾಡಿದರು, ಸಹಕಾರಿಯ ಉದ್ಯೋಗಿ ಸುಧಾ ಪ್ರಾರ್ಥಿಸಿದರು. ಉಪಾಧ್ಯಕ್ಷರಾದ ಶ್ರೀ ಶಿವಕುಮಾರ್ ವಂದಿಸಿದರು.

**ಕೋಲ್ಡ್ ಸ್ಟೋರೇಜ್ ವಿಶೇಷತೆಗಳು:-**

1. 10 ಕೋಟಿ ರು. ವೆಚ್ಚದ ಯೋಜನೆ
2. 1 ಲಕ್ಷ ಚೀಲ ಹಿಡಿಸುವ 5 ಸಾವಿರ ಮೆಟ್ರಿಕ್ ಟನ್ ಸಾಮರ್ಥ್ಯ
3. 25 ಸಾವಿರ ಚದರಡಿ ವಿಸ್ತೀರ್ಣದಲ್ಲಿ ನಿರ್ಮಾಣವಾದ ಮೂರು ಮಹಡಿಗಳ ಕಟ್ಟಡ
4. ಕನಿಷ್ಠ 2- 15 ಡಿಗ್ರಿಯಷ್ಟು ಉಷ್ಣಾಂಶ ನಿಯಂತ್ರಣ
5. ಮೇಲ್ಛಾವಣಿಯಲ್ಲಿ ನಿರ್ಮಿಸಿದ 100 ಕಿ.ವ್ಯಾ. ಸಾಮರ್ಥ್ಯದ ಸೋಲಾರ್ ವಿದ್ಯುತ್ ಉತ್ಪಾದನಾ ಘಟಕ
6. ಪ್ರತ್ಯೇಕ ಶಾಖಾ ಕಚೇರಿ, ಅತಿಥಿಗೃಹ, ಹಮಾಲಿ ರೆಸ್ಟ್ ರೂಂ, ಸಿಬ್ಬಂದಿ ವಸತಿ ನಿಲಯ
7. ದಾಸ್ತಾನು ಸಾಲ ನೀಡಿಕೆ

**ಸಹಕಾರಿ ವಿಭಿನ್ನ ಚಟುವಟಿಕೆಗಳ ಕುರಿತು :** 13 ವರ್ಷಗಳಲ್ಲಿ ಶಾರದಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಸ್ಥೆ ಬೆಳೆದ ಪರಿ ಅನೂಹ್ಯ. ಜಾಮಿನು ಸಾಲ ನೀಡಿಕೆಯಿಂದ ಆರಂಭಗೊಂಡ ಸಂಸ್ಥೆಯ ಕಾರ್ಯ ಚಟುವಟಿಕೆಯು ಸಿಮೆಂಟ್ ವಿತರಣೆ ವ್ಯವಹಾರ, ಜಲ ವಿದ್ಯುತ್ ಘಟಕಕ್ಕೆ ಸಾಲ ನೀಡಿಕೆ, ದಾಸ್ತಾನು ಸಾಲದ ಮೂಲಕ ವಿಸ್ತರಣೆಯಾಯಿತು. ನಂತರದಲ್ಲಿ ಅಡಕೆ ಮಂಡಿ ಸ್ಥಾಪನೆಯಾಯಿತು. ಆ ಬಳಿಕ ಈ ವರೆಗೆ ಒಟ್ಟು ಐದು ಶಾಖೆಗಳನ್ನು, ನಾಲ್ಕು ಅಡಕೆ ಮಂಡಿಗಳನ್ನು ತೆರೆದು ಕಾರ್ಯ ನಿರ್ವಹಿಸುತ್ತಿದೆ.

ಶಿವಮೊಗ್ಗ ಎಪಿಎಂಸಿಯಲ್ಲಿ ಸುಮಾರು 1.32 ಕೋಟಿ ರು. ವೆಚ್ಚದಲ್ಲಿ ತನ್ನದೇ ವಿಶಾಲ ಕಟ್ಟಡ ಹೊಂದಿರುವ ಸಂಸ್ಥೆಯು ಇದೀಗ ರಿಪ್ಪನ್‌ಪೇಟೆಯಲ್ಲಿ ನಿರ್ಮಿಸಿದ ಕೋಲ್ಡ್ ಸ್ಟೋರೇಜ್ ಸಂಸ್ಥೆಯ ಇನ್ನೊಂದು ಮೈಲಿಗಲ್ಲಾಗಿದೆ.

# ಮಹಾ ಶಿವರಾತ್ರಿ – ರುದ್ರನ ಮಂಗಳಕರ ರಾತ್ರಿ

– ಶ್ರೀ ಶಂಕರ್ ಎಸ್

ದ್ವಾದಶ ಜ್ಯೋತಿರ್ಲಿಂಗಗಳ ಸ್ಮರಣೆ

ಸೌರಾಷ್ಟ್ರೇ ಸೋಮನಾಥಂಚ ಶ್ರೀಶೈಲೇ ಮಲ್ಲಿಕಾರ್ಜುನಮ್ ।
ಉಜ್ಜಯಿನ್ಯಾಂ ಮಹಾಕಾಲಂ ಓಂಕಾರೇತ್ವಮಾಮಲೇಶ್ವರಮ್ ॥
ಪರ್ಲ್ಯಾಂ ವೈದ್ಯನಾಥಂಚ ಢಾಕಿನ್ಯಾಂ ಭೀಮ ಶಂಕರಮ್ ।
ಸೇತುಬಂಧೇತು ರಾಮೇಶಂ ನಾಗೇಶಂ ದಾರುಕಾವನೇ ॥
ವಾರಣಾಶ್ಯಾಂತು ವಿಶ್ವೇಶಂ ತ್ರಯಂಬಕಂ ಗೌತಮೀತಟೇ ।
ಹಿಮಾಲಯೇತು ಕೇದಾರಂ ಘೃಷ್ಣೇಶಂತು ವಿಶಾಲಕೇ ॥
ಏತಾನಿ ಜ್ಯೋತಿರ್ಲಿಂಗಾನಿ ಸಾಯಂ ಪ್ರಾತಃ ಪಠೇನ್ನರಃ ।
ಸಪ್ತ ಜನ್ಮ ಕೃತಂ ಪಾಪಂ ಸ್ಮರಣೇನ ವಿನಶ್ಯತಿ ॥

ಶಿವರಾತ್ರಿಯ ಆಚರಣೆ ನಮ್ಮ ನಾಡಿನಲ್ಲಿ ತುಂಬಾ ಜನಪ್ರಿಯ. ಆ ದಿನ ಇಡೀ ರಾತ್ರಿ ದೇವಾಲಯಗಳಲ್ಲಿ, ಅಷ್ಟೇ ಏಕೆ, ಮನೆಗಳಲ್ಲೂ ನಿರಂತರ ಭಜನೆಗಳು ನಡೆಯುತ್ತವೆ. ಭಕ್ತರೆಲ್ಲರೂ ಉಪವಾಸವಿದ್ದು, ಇಡೀ ರಾತ್ರಿ ಅಖಂಡ ಜಾಗರಣೆಯ ನಿಯಮ ಪಾಲಿಸುತ್ತಾರೆ. ಉಪವಾಸ–ಜಾಗರಣೆ ಶಿವಧ್ಯಾನಗಳ ತ್ರಿವೇಣಿ ಸಂಗಮವೇ ಶಿವರಾತ್ರಿ. ಶಿವನು ನಮಗಾಗಿ ಧರಣಿಗೆ ಅವತರಿಸಿ ಬಂದಾಗ ನಾವು ನಿದ್ರೆ ಮಾಡುವುದೂ ಮಾಯೆಯಲ್ಲವೇ? ಅಂದು ಎಲ್ಲ ಶಿವಲಿಂಗಗಳಿಗೆ ಅರ್ಚನೆ, ಅಭಿಷೇಕ ಆಗಿ ಮಂತ್ರಪಠಣೆ–ಭಜನೆ ಸಂಕೀರ್ತನೆಗಳು ಸಂಭ್ರಮದಿಂದ ನೆರವೇರುತ್ತವೆ. ಹಲವು ಶಿವಾಲಯಗಳಲ್ಲಿ 11 ಸಲ ರುದ್ರಾಭಿಷೇಕ ಮಾಡುತ್ತಾರೆ. ಭಕ್ತರು ನೂರಾ ಒಂದು ಇಲ್ಲವೆ ಸಾವಿರದ ಒಂದು ಬಿಲ್ವ ಪತ್ರೆಗಳನ್ನು ಪಂಚಾಕ್ಷರಿ ಮಂತ್ರ ಪಠನದೊಂದಿಗೆ ಹರನಿಗೆ ಸಮರ್ಪಿಸುತ್ತಾರೆ.



ಹೀಗೆ ಶಿವರಾತ್ರಿ ಕೇವಲ ಉಣ್ಣುವ, ಉಡುವ ತೊಡುವ ಹಬ್ಬ ಮಾತ್ರವಲ್ಲದೆ ನಮ್ಮ ಆಚಾರ–ವಿಚಾರಗಳು ಮಹಾ ಪರಿವರ್ತನೆಯ ಸಾಂಸ್ಕೃತಿಕ ಹಬ್ಬವೂ ಹೌದು. ನಮ್ಮ ನಾಡಿನ ತಾಯ್ನೆಲದ ಭಾಷೆಯ ಮಣ್ಣಲ್ಲಿ ಮಹಾಲಿಂಗ, ಬೆವರಲ್ಲಿ ಅಭಿಷೇಕ, ಕಲ್ಲಲ್ಲಿ ಕರ್ಪೂರ, ಲಿಂಗ ನುಡಿಯಲ್ಲಿ ನೈವೇದ್ಯ, ಈ ಅಧ್ಯಾತ್ಮಿಕ ಸಂಸ್ಕಾರ ಹಾಗೂ ಸಾಂಸ್ಕೃತಿಕ ಜೀವನದ ಒಡಲಾಳದ ಮಹಾ ಶೋಧನೆಯ ಯಾತ್ರೆಯೇ ಮಹಾ ಶಿವರಾತ್ರಿ!

**ಶಿವರಾತ್ರಿಯ ಮಹಿಮೆ:**

ಕೈಲಾಸವಾಸಿ ಶಿವನಿಗೆ ಶಿವರಾತ್ರಿ ಅತ್ಯಂತ ಪ್ರಿಯವಾದ ದಿನ. ಶಿವರಾತ್ರಿಯೆಂದು ತನ್ನನ್ನು ಪೂಜಿಸುವ ಭಕ್ತರಿಗೆ ತಾನು ವಿಶೇಷವಾಗಿ ಅನುಗ್ರಹ ನೀಡುವುದಾಗಿ ಸ್ವತಃ ಶಿವನೇ ಪಾರ್ವತಿಯಲ್ಲಿ ಅರುಹಿದ್ದಾನೆ ಎನ್ನುತ್ತದೆ ಶಿವಪುರಾಣ. ಶಿವ–ಪಾರ್ವತಿಯರ ವಿವಾಹ ಮಹೋತ್ಸವದ ದಿನವಿದು ಎಂಬುದು ವಿಶೇಷ. ಹಿಮವಂತನ ಮಗಳು ಪಾರ್ವತಿ ಈ ದಿನದಂದು ರಾತ್ರಿಯಿಡಿ ಶಿವನಾಮ ಪಠಿಸುತ್ತಾ, ತಪಸ್ಸು ಮಾಡಿ, ಶಿವನನ್ನು ಮೆಚ್ಚಿಸಿ, ವಿವಾಹವಾದಳೆಂಬುದು ಪ್ರತೀತಿ. ಶಿವ ರುದ್ರತಾಂಡವನಾಡಿದ ರಾತ್ರಿಯೂ ಇಂದೇ ಎನ್ನಲಾಗುತ್ತದೆ. ದೇವತೆಗಳು ಹಾಗೂ ಅಸುರರ ನಡುವೆ ಸಮುದ್ರ ಮಂಥನ ನಡೆದು ವಿಷ ಉದ್ಭವವಾದಾಗ, ಅದನ್ನು ಶಿವ ಕುಡಿದ. ವಿಷ ಗಂಟಲೊಳಗಿಂದ ಇಳಿಯದಂತೆ ಪಾರ್ವತಿ ಇಡೀ ರಾತ್ರಿ ತಡೆದಳು ಎನ್ನುತ್ತದೆ ಶಿವಪುರಾಣದ ಇನ್ನೊಂದು ಮಹಿಮೆ. ಹಾಗಾಗಿ, ಭಕ್ತರು ಇಡೀ ರಾತ್ರಿ ಎಚ್ಚರವಿದ್ದು, ನೀಲಕಂಠನನ್ನು ಸ್ತುತಿಸುತ್ತಾರೆ. ಭಗೀರಥನ ತಪಸ್ಸಿಗೆ ಮೆಚ್ಚಿ ಇಳೆಗೆ ಇಳಿದು ಬಂದ ಗಂಗೆಯನ್ನು ಶಿವ ತನ್ನ ಜಡೆಯಲ್ಲಿ ತುಂಬಿಸಿಕೊಂಡಿದ್ದ. ಇದರಿಂದ ವಿಚಲಿತನಾದ ಭಗೀರಥ ಗಂಗೆಯನ್ನು ಭೂಮಿಗೆ ಹರಿಸುವಂತೆ ಶಿವನನ್ನು ಪ್ರಾರ್ಥಿಸಿದ. ಆತನ ಭಕ್ತಿಗೆ ಮೆಚ್ಚಿ ಶಿವ ಗಂಗೆಯನ್ನು ಹರಿಯಬಿಟ್ಟದ್ದು ಇದೇ ದಿನ ಎನ್ನುತ್ತದೆ ಪುರಾಣ. ಲಿಂಗಪುರಾಣದ ಪ್ರಕಾರ, ಲಿಂಗ ರೂಪಿಯಾಗಿ ಭಕ್ತರಿಗೆ ಅನುಗ್ರಹ ನೀಡಿದ ದಿನವಿದು. ಶಿವನ ಆದಿ ಮತ್ತು ಅಂತ್ಯ ಹುಡುಕಲು ಹೊರಟ ವಿಷ್ಣು ಹಾಗೂ ಬ್ರಹ್ಮನಿಗೆ, ಶಿವರಾತ್ರಿಯಂದು ಶಿವ ಲಿಂಗರೂಪಿಯಾಗಿ ದರ್ಶನ ನೀಡಿದ ಎಂಬುದು ಪ್ರತೀತ.

**ಬೇಡನ ಶಿವಭಕ್ತಿ:**

ಶಿವರಾತ್ರಿ ಆಚರಣೆಯ ಕುರಿತಾಗಿ ಪ್ರಚಲಿತದಲ್ಲಿರುವ ಕಥೆಯಿದು. ಹಿಂದೆ ಬೇಡನೊಬ್ಬ ಕಾಡಿನಲ್ಲಿ ಬೇಟೆಗಾಗಿ ತೆರಳಿದ್ದ. ದಿನವಿಡಿ ಅಲೆದರೂ ಆತನಿಗೆ ಯಾವುದೇ ಬೇಟೆ ಸಿಗಲಿಲ್ಲ. ಬೇಟೆ ಅರಸಿ ಹೊರಟ ಬೇಡ ದಾರಿ ತಪ್ಪಿ ಅರಣ್ಯದಲ್ಲೇ ಅಲೆಯತೊಡಗಿದ. ಅದಾಗಲೇ ಸಂಜೆಯಾಗಿತ್ತು. ಕ್ರೂರ ಪ್ರಾಣಿಗಳು ಆತನನ್ನು ಸುತ್ತುವರಿಯತೊಡಗಿದವು. ಭಯಗ್ರಸ್ತನಾದ ಬೇಡ ಮರವೇರಿದ. ಮನದಲ್ಲೇ ಶಿವನನ್ನು ಧ್ಯಾನಿಸುತ್ತಾ ಮರದ ಎಲೆಗಳನ್ನು ಕಿತ್ತು ಕೆಳಗಡೆ ಹಾಕತೊಡಗಿದ. ಆ ಎಲೆಗಳು ಅವನಿಗರಿವಿಲ್ಲದಂತೆಯೇ ಕೆಳಗಡೆಯಿದ್ದ ಶಿವಲಿಂಗದ ಮೇಲೆ ಬೀಳತೊಡಗಿದವು. ಕಾಕತಾಳೀಯವೆಂದರೆ ಆತ ಏರಿದ್ದ

ಮರ ಬಿಲ್ವಮರವಾಗಿತ್ತು. ಶಿವರಾತ್ರಿಯೆಂದು ಪೂರ್ತಿ ಜಾಗರಣೆಯಿದ್ದು, ಬಿಲ್ವಪತ್ರೆಯನ್ನು ಶಿವನಿಗೆ ಅರ್ಪಿಸಿದ ಬೇಡನಿಗೆ ಶಿವ ಅಭಯ ನೀಡಿದ. ಶಿವನೇ ಆತನನ್ನು ರಕ್ಷಿಸಿದ ಎಂಬ ಸುದ್ದಿ ಹರಡಿ ಭಕ್ತರು ಶಿವರಾತ್ರಿಯಂದು ಶಿವನನ್ನು ಪೂಜಿಸಲು ಆರಂಭಿಸಿದರು. ಪುಣ್ಯದ ಫಲವಾಗಿ ಬೇಡ ಮುಂದಿನ ಜನ್ಮದಲ್ಲಿ ರಾಜಾ ಚಿತ್ರಭಾನುವಾಗಿ ಜನಿಸಿದ ಎಂಬುದು ಕಥೆ. ಮಹಾಭಾರತದಲ್ಲಿ ಬರುವ ಈ ಕಥೆಯನ್ನು ಮರಣಶಯ್ಯೆಯಲ್ಲಿ ಮಲಗಿದ್ದ ಭೀಷ್ಮ ಹೇಳಿದನೆಂಬುದು ಪ್ರತೀತಿ.

ಹಿಂದುಗಳು ವರ್ಷದುದ್ದಕ್ಕೂ ಒಂದಲ್ಲ ಒಂದು ಹಬ್ಬ ಹಾಗೂ ವ್ರತ ಆಚರಿಸುತ್ತಾರೆ. ಇವುಗಳಲ್ಲಿ ಈ ಹಬ್ಬ ಅತ್ಯಂತ ಮಹತ್ವ ಕೊಟ್ಟಿದ್ದಾರೆ. ಇವುಗಳಿಗೆ ಪುರಾಣದ ಹಿನ್ನೆಲೆ ಉಂಟು. ವಿಜ್ಞಾನ ಹಿನ್ನಲೆಯೂ ಇದೆ. ಇವುಗಳಲ್ಲಿ ಒಂದು ಶಿವರಾತ್ರಿಯ ಜಾಗರಣೆ ಆ ದಿನ ಶಿವನು ಲೋಕ ಕಲ್ಯಾಣಕ್ಕಾಗಿ ವಿಷವನ್ನು ಆಪೋಶನ ಮಾಡಿದ ದಿನ.

ಹಿಂದೆ ದೇವಾಸುರರು ಅಮೃತ ಪಡೆಯಲು ಕ್ಷೀರಸಾಗರ ಮಥನಕ್ಕೆ ಮುಂದಾದರು. ಮಂದರಪರ್ವತ ಕಡಗೋಲಾಯಿತು. ವಾಸುಕಿ ಹಗ್ಗವಾಯಿತು. ಮಥನಕಾರ್ಯ ರಭಸವಾಗಿ ನಡೆದಾಗ ಸರ್ಪವಾದ ವಾಸುಕಿಯ ಬಾಯಿಂದ ವಿಷ ಜ್ವಾಲೆ ಹೊರಬಂದು ಕ್ಷೀರ ಸಾಗರವನ್ನು ವ್ಯಾಪಿಸಿತು. ಅದರ ಬಾಧೆಗೆ ಎಲ್ಲರೂ ಓಡಿ ಹೋದಾಗ ಶಿವನು ತನ್ನ ಅಂಗೈಯಲ್ಲಿ ವಿಷವನ್ನು ಶೇಖರಿಸಿ ಕುಡಿದನು. ಕೂಡಲೇ ಪಾರ್ವತಿ ಮಾತೆ ಶಿವನ ಕಂಠ ಒತ್ತಿ ಹಿಡಿಯಲು ವಿಷವು ಅಲ್ಲಿಯೇ ನಿಂತಿತಂತೆ. ಅಲ್ಲಿಂದ ಶಿವನು ವಿಷಕಂಠ ಅಥವಾ ನೀಲಕಂಠವೆಂದು ಅನೇಕ ಹೆಸರಿನಲ್ಲಿ ಕರೆದರು. ಆ ದಿನವೇ ಮಾಘ ಕೃಷ್ಣ ಚತುರ್ದಶಿ. ಅಂದಿನಿಂದ ಪ್ರತಿ ವರ್ಷ ಶಿವರಾತ್ರಿಯ ಆಚರಣೆ ಪ್ರಾರಂಭವಾಯಿತು.

ಇನ್ನು ಆ ದಿನ ನಡೆಸುವ ಜಾಗರಣೆ ಇದರಲ್ಲಿ ವಿಜ್ಞಾನವಿದೆ. ವಿಷವನ್ನು ಕುಡಿದರೆ ಅಥವಾ ವಿಷ ಜಂತುಗಳು ಕಚ್ಚಿದರೆ 24 ಗಂಟೆ ಅವರನ್ನು ನಿದ್ರಿಸಲು ಬಿಡುವುದಿಲ್ಲ. ಕಾರಣ ವಿಷವು ದೇಹದಾದ್ಯಂತ ವ್ಯಾಪಿಸಬಾರದು ಎಂದು. ನಿದ್ರಿಸಿದರೆ ವಿಷ ವ್ಯಾಪಿಸಿ ರೋಗಿಯ ಸ್ಥಿತಿ ಚಿಂತಾಜನಕ ಆಗುತ್ತದೆ. ವಿಷ ಶರೀರದಲ್ಲಿ ತಾಪ ಹೆಚ್ಚು ಮಾಡುವುದರಿಂದ ಅದರ ಶಮನಕ್ಕಾಗಿ ಎಳನೀರು, ಹಣ್ಣುಗಳು, ಪಾನಕ ಕೊಡುತ್ತಾರೆ. ಲೋಕ ಕಲ್ಯಾಣಕ್ಕಾಗಿ ನಂಜುಂಡ ನಂಜುಂಡನನ್ನು ಸ್ಮರಿಸಿ ಸ್ತುತಿಸುವ ಆ ದಿನವೇ ಶಿವರಾತ್ರಿ.

## ಉದ್ಘಾಟನಾ ಸಮಾರಂಭ




**ಮಂಗಳೂರು:** ದಿನಾಂಕ 25.01.2020 ರಂದು ಶ್ರೀ ಪ್ರಿಯದರ್ಶಿನಿ ಸೌಹಾರ್ದ ಸಹಕಾರಿಯ ಉದ್ಘಾಟನೆಯನ್ನು ಡಾ. ಎಂ. ಎಸ್ ರಾಜೇಂದ್ರ ಕುಮಾರ್, ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರಿ ಮಾರಾಟ ಮಹಾಮಂಡಳ ನಿ., ಬೆಂಗಳೂರು ಹಾಗೂ ಅಧ್ಯಕ್ಷರು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಮಂಗಳೂರು. ಇವರು ನೇರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಕೆ. ಹರೀಶ ಕುಮಾರ್, ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಶ್ರೀ ಪ್ರಿಯದರ್ಶಿನಿ ಸೌಹಾರ್ದ ಸಹಕಾರಿ ನಿ., ಬೆಳ್ತಂಗಡಿ ಇವರು ವಹಿಸಿದರು. ನಿರಖು ಠೇವಣಿ ಪತ್ರ ಬಿಡುಗಡೆಯನ್ನು ಶ್ರೀ ಬಿ. ರಮಾನಾಥ ರೈ, ಮಾಜಿ ಸಚಿವರು ಇವರು ನೇರವೇರಿಸಿದರು. ಭದ್ರತಾ ಕೊಠಡಿ ಉದ್ಘಾಟನೆಯನ್ನು ಪ್ರೊ. ಎಸ್. ಪ್ರಭಾಕರ್, ಉಪಾಧ್ಯಕ್ಷರು, ಶ್ರೀ ಧ.ಮಂ. ಶಿಕ್ಷಣ ಸಂಸ್ಥೆಗಳು ಉಜಿರೆ ಇವರು ನೇರವೇರಿಸಿದರು. ಗಣಕಯಂತ್ರ ಉದ್ಘಾಟನೆಯನ್ನು ರೆ.ಫಾ. ಬೊನವೆಂಚರ್ ನಝುರತ್, ಧರ್ಮಗುರುಗಳು, ಚರ್ಚ್, ಬೆಳ್ತಂಗಡಿ ಇವರು ನೇರವೇರಿಸಿದರು. ಪಾಲು ಬಂಡವಾಳದ ಪತ್ರ ವಿತರಣೆಯನ್ನು ಶ್ರೀ ಕೆ. ರಮಾನಂದ ಸಲ್ಯಾನ್, ಉದ್ಯಮಿಗಳು ಬೆಳ್ತಂಗಡಿ ಇವರು ನೇರವೇರಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ಬಿ. ನಿರಂಜನ್, ನಿರ್ದೇಶಕರು, ಎಸ್.ಸಿ.ಡಿ.ಸಿ.ಸಿ ಬ್ಯಾಂಕ್ ಮಂಗಳೂರು, ಶ್ರೀ ಬಿ. ಪ್ರವೀಣ್ ನಾಯಕ್, ಸಹಕಾರಿ ಸಂಘಗಳ ಉಪನಿಬಂಧಕರು, ಮಂಗಳೂರು, ಶ್ರೀ ಪದ್ಮನಾಭ ಮಾಣಿಂಜ, ಅಧ್ಯಕ್ಷರು, ಗುರುನಾರಾಯಣ ಸ್ವಾಮಿ ಸೇವಾ ಸಂಘ, ಬೆಳ್ತಂಗಡಿ, ಶ್ರೀ ಜಯರಾಮ ಶೆಟ್ಟಿ, ಅಧ್ಯಕ್ಷರು, ಬಂಟರ ಸಂಘ, ಬೆಳ್ತಂಗಡಿ, ಶ್ರೀ ಜಿ. ಸೋಮೇಗೌಡ, ಅಧ್ಯಕ್ಷರು, ಗೌಡರ ಯಾನ ಒಕ್ಕಲಿಗರ ಸೇವಾ ಸಂಘ, ಬೆಳ್ತಂಗಡಿ ಇವರು ಉಪಸ್ಥಿತರಿದ್ದರು.



**ಚಿಕ್ಕಮಂಗಳೂರು:** ಯಡಗೆರೆ ಸೌಹಾರ್ದ ಪತ್ತಿನ ಸಹಕಾರಿಯ 5ನೇ ಶಾಖೆಯ ಉದ್ಘಾಟನೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ವೈ. ಎಸ್ ಸುಬ್ರಹ್ಮಣ್ಯ ಇವರು ನೇರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು, ಹಿರಿಯ ಸಹಕಾರಿಯಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಸಹಕಾರ ಜನಸಮುದಾಯದ ಚಳುವಳಿ

– ಶ್ರೀ ಶಂಕರ ಹೆಗಡೆ

ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಚಳುವಳಿಯು ಜನಸಮುದಾಯದ ಚಳುವಳಿಯಾದಂತೆ ಸಹಕಾರ ಚಳುವಳಿಯೂ ಸಹ 1905 ರಿಂದ ಜನಸಮುದಾಯದ ಚಳುವಳಿಯಾಗಿ ಗುರುತಿಸಿಕೊಂಡಿತು. ಸಣ್ಣ ಮತ್ತು ಅತಿ ಸಣ್ಣ ರೈತರು ಭೂರಹಿತ ಕೃಷಿ ಕಾರ್ಮಿಕರ ದುರ್ಬಲ ವರ್ಗದ ಕೃಮೊಗ್ಗ ನೇಕಾರರು, ಮೀನುಗಾರರು ಕುಶಲಕರ್ಮಿಗಳು ಇತ್ಯಾದಿ ವರ್ಗಗಳ ಕೋಟ್ಯಂತರ ಜನರ ಒತ್ತಾಸೆ ಮತ್ತು ಆಕಾಂಕ್ಷೆಗಳೇ ಎರಡೂ ಚಳುವಳಿಗಳಲ್ಲಿ ಪ್ರಮುಖವಾಗಿ ಅಡಕವಾಗಿದ್ದ ಅಂಶಗಳಾಗಿದ್ದವು. ಬಡಜನರನ್ನು ಹಾಗೂ ಆರ್ಥಿಕ ಶೋಷಣೆಗೆ ಒಳಗಾದ ಶೋಷಿತರನ್ನು ಸಹಕಾರಿ ಸಂಘಗಳ ಅಡಿಯಲ್ಲಿ ತರಲು ಅನೇಕ ಪ್ರಯತ್ನಗಳು ನಡೆಸಿವೆ. ಈ ಬಗ್ಗೆ ದೇಶದಾದ್ಯಂತ ಸಹಕಾರ ಚಳವಳಿ ವಿವಿಧ ಕ್ಷೇತ್ರಗಲ್ಲಿ ವ್ಯಾಪಿಸಿಕೊಂಡಿದೆ. ರಾಜಕೀಯ ಸ್ವಾತಂತ್ರ್ಯದ ಜೊತೆಗೆ ಆರ್ಥಿಕ ಸ್ವಾತಂತ್ರ್ಯಕ್ಕೂ ಸಹಕಾರ ಚಳವಳಿ ನಾಂದಿ ಹಾಡಿದೆ.

ಸಹಕಾರಿ ಸಂಸ್ಥೆಗಳು ಪ್ರಜಾಸತ್ತಾತ್ಮಕ ತಳಹದಿ ಮೇಲೆ ಸ್ಥಾಪಿಸಲಾದ ಸಂಸ್ಥೆಗಳಾಗಿದ್ದು ಅವುಗಳು ಸದಸ್ಯರುಗಳ ನಿಯಂತ್ರಣಕ್ಕೆ ಒಳಪಟ್ಟಿದೆ ಹೊರತು ಸರಕಾರಿ ಸಂಸ್ಥೆಗಳಾಗಬಾರದೆಂದು ಅನೇಕ ಸಹಕಾರಿಗಳು ಆಶಯ. ಸದಸ್ಯರು ಸಂಸ್ಥೆಯ ಕಾರ್ಯನೀತಿಯನ್ನು ರೂಪಿಸುವಲ್ಲಿ ಮತ್ತು ತೀರ್ಮಾನಗಳನ್ನು ಕೈಗೊಳ್ಳುವಲ್ಲಿ ಭಾಗವಹಿಸುತ್ತಾರೆ. ಈ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಸದಸ್ಯರಿಗೆ ಜವಾಬ್ದಾರರಾಗಿರುತ್ತಾರೆ.

ದೇಶ ಸ್ವಾತಂತ್ರ್ಯ ಪಡೆದ ಮೇಲೆ ಆಡಳಿತವನ್ನು ನಾವೇ ನಿರ್ವಹಿಸುವ ಸಂಸದೀಯ ಪ್ರಜಾಸತ್ತಾತ್ಮಕ ಪದ್ದತಿಯನ್ನು ಅನುಸರಿಸಿ ಪ್ರಜೆಗಳಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ಈ ದೇಶದ ಆಡಳಿತವನ್ನು ನಡೆಸುತ್ತಾ ಬಂದಿದ್ದಾರೆ. ಈ ಕಳೆದ 66 ವರ್ಷಗಳ ಅವಧಿಯಲ್ಲಿ ದೇಶದ ಪ್ರಜಾಪ್ರಭುತ್ವ ಸರಕಾರಗಳು ದೇಶವನ್ನು ಯಾವ ರೀತಿ ಮುನ್ನಡೆಸಿವೆ ಎನ್ನುವ ವಿಚಾರ ಎಲ್ಲ ಪ್ರಜೆಗಳಿಗೂ ಗೊತ್ತು. ಅದರಂತೆ ಸಹಕಾರಿ ಸಂಘಗಳ ಆಡಳಿತ ಪ್ರಜಾಸತ್ತಾತ್ಮಕವಾಗಿರಬೇಕು. ಸರ್ಕಾರದ ಅಥವಾ ಬಾಹ್ಯ ನಿಯಂತ್ರಣ ಚಳವಳಿಯ ಮೇಲೆ ಇರಬಾರದು ಎಂಬುದು ಸಹಕಾರಿ ಕ್ಷೇತ್ರದ ಮೂಲ ಆಶಯ.

**ಸ್ವಾಯತ್ತತೆ :**

ಸಹಕಾರಿ ಸಂಸ್ಥೆಗಳು ಸ್ವ ಸಹಾಯಕ್ಕಾಗಿ ಸ್ಥಾಪಿತವಾದ ಸ್ವಾಯತ್ತ ಸಂಸ್ಥೆಗಳು, ಅವುಗಳ ಸದಸ್ಯರಿಂದ ಸದಸ್ಯರಿಗಾಗಿ ಸದಸ್ಯರುಗಳು ನಿಯಂತ್ರಣಕ್ಕೆ ಒಳಪಟ್ಟಿರುತ್ತವೆ. ಕೆಲವು ದೇಶಗಳಲ್ಲಿ ಸಹಕಾರಿ ಇಲಾಖೆ ಇಲ್ಲದೇ ಸಹಕಾರ ಆಂದೋಲನ ಉತ್ತಮವಾಗಿ ನಡೆಯುತ್ತಿರುವುದು ಉಲ್ಲೇಖನೀಯ. ಆದರೆ ನಮ್ಮ ದೇಶದಲ್ಲಿ ಸರ್ಕಾರದಿಂದಲೇ ಸ್ಥಾಪಿತಗೊಂಡ ಸಹಕಾರ ಚಳುವಳಿ ತನ್ನ ಕಾಲ ಮೇಲೆ ನಿಲ್ಲಲು ಪ್ರಯತ್ನಿಸುತ್ತಿದ್ದರೂ ಸಹ ಅನೇಕ ಸಲ ರಾಜಕೀಯ ಮತೀಯ ಕಾರಣಗಳಿಂದ ಸಂಘಗಳು ತಮ್ಮ ಅಸ್ಥಿತ್ವವನ್ನು ಕಳೆದುಕೊಳ್ಳುತ್ತವೆ. ಅಲ್ಲದೇ ಮೂಲಭೂತವಾಗಿ ಸಹಕಾರಿ ಸಂಘಗಳು ಬಂದಿದ್ದು ಗ್ರಾಮೀಣ ಪತ್ತಿನ ವ್ಯವಸ್ಥೆಗೆ ಒಂದು ಸುವರ್ಣ ಮಾಧ್ಯಮವಾಗಿ ಆದರೆ ಇಂದು ಗ್ರಾಮೀಣ ಪ್ರದೇಶಗಳಲ್ಲಿ ಪತ್ತಿನ ಸಂಘಗಳು ಅಪೇಕ್ಷಿಸಿದ ಮಟ್ಟದಲ್ಲಿ ಸಾಧನೆಯಲ್ಲಿ ಮಾಡಲ್ಲ. ಗ್ರಾಮೀಣ ರೈತರ ಆಶೋತ್ತರಗಳನ್ನು ಈಡೇರಿಸುವಲ್ಲಿ ಸಂಪೂರ್ಣ ಯಶಸ್ಸು ಕಂಡಿಲ್ಲ. ಈ ಬಗ್ಗೆ 2004 ರಲ್ಲಿ ಭಾರತ ಸರ್ಕಾರದಿಂದ ರಚಿತವಾದ ಪ್ರೋ. ಎ. ವೈದ್ಯನಾಥನ್ ಕಾರ್ಯಪಡೆ ಒಂದು ಮೈಲುಗಲ್ಲು. ಈ ಕಾರ್ಯಪಡೆಯೂ ಸಹ ಸಹಕಾರಿ ಗ್ರಾಮೀಣ ಕೃಷಿ ವ್ಯವಸ್ಥೆಗೆ ಹೊಸ ರೂಪ ಕೊಡಲು ಸ್ವಾಯತ್ತತೆ ತರಲು ಅನೇಕ ದೂರಗಾಮಿ ಶಿಫಾರಸ್ಸು ಮಾಡಿದೆ.

ಈ ವಿಷಯದಲ್ಲಿ ರಾಷ್ಟ್ರೀಯ ಹಿರಿಯ ಸಹಕಾರಿಗಳಾದ ಶ್ರೀ ಬಿ.ಎಸ್. ವಿಶ್ವನಾಥನ್ ರವರು ಹೇಳಿದ ಈ ಕೆಳಗಿನ ವಿಚಾರಗಳನ್ನು ಸಹಕಾರಿಗಳು ಗಂಭೀರವಾಗಿ ಪರಿಗಣಿಸುವುದು ಸೂಕ್ತವಾಗಿದೆ.

1. ಸಹಕಾರಿ ಸಂಸ್ಥೆಗಳು ಸೇವಾ ಸಂಸ್ಥೆಗಳು ಎಂಬ ಭಾವನೆಯು ಹೋಗಿ ಅವು ಸಹ ಒಂದು ವ್ಯವಹಾರಿಕ ಸಂಸ್ಥೆಗಳು ಎಂಬ ಕಲ್ಪನೆ ಸರಕಾರಗಳಲ್ಲಿ ಹಾಗೂ ಸಾರ್ವಜನಿಕರಲ್ಲಿ ಮೂಡಿರಬರಬೇಕು.

2. ಆಡಳಿತ ವ್ಯವಸ್ಥೆಯಲ್ಲಿ ಅಮೂಲಾಗ್ರ ಬದಲಾವಣೆಯಾಗಿ ಸಹಕಾರ ಸಂಸ್ಥೆಗಳಲ್ಲಿ ನಂಬಿಕೆ ವಿಶ್ವಾಸದ ತಳಹದಿಯ ಮೇಲೆ ಆಡಳಿತ ವ್ಯವಸ್ಥೆ ರೂಪುಗೊಳ್ಳಬೇಕು.

3. ಸಂಘದ ವ್ಯವಹಾರದಲ್ಲಿ ಸಕ್ರಿಯಾವಾಗಿ ಪಾಲ್ಗೊಳ್ಳುವ ಸದಸ್ಯರು ಮಾತ್ರ

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 36


ಸಂಘದಲ್ಲಿ ಒಳಗೊಂಡಿರಬೇಕು.

4. ಸರ್ಕಾರ ಅಥವಾ ಯಾವುದೇ ಬಾಹ್ಯ ಮೂಲಗಳ ಹತೋಟಿಯಿಂದ ಚಳವಳಿಯು ಮುಕ್ತವಾಗಿರಬೇಕು ಮತ್ತು ಸ್ವಾವಲಂಬಿಯಾಗಬೇಕು.

5. ಸದಸ್ಯರಿಗೆ ನಿರಂತರವಾಗಿ ಶಿಕ್ಷಣ ತರಬೇತಿ ಅನಿವಾರ್ಯ ಮತ್ತು ಅವಶ್ಯ.

6. ಸಂಘಗಳ ಸಂಖ್ಯೆ ಕಡಿಮೆಯಿದ್ದರೂ ವ್ಯವಹಾರ ಗುಣಾತ್ಮಕವಾಗಿರಬೇಕು.

7. ಸಹಕಾರಿ ಇಲಾಖೆ ನಿಯಂತ್ರಣದ ಜೊತೆಗೆ ಗೆಳೆಯ ತತ್ವಜ್ಞಾನಿ ಮತ್ತು ಮಾರ್ಗದರ್ಶಕವಾಗಿ ಕಾರ್ಯ ನಿರ್ವಹಿಸಬೇಕು.

8. ಸಹಕಾರಿ ತತ್ವ ಮತ್ತು ಆಚರಣೆ ಬಗ್ಗೆ ವ್ಯಾಪಕ ಜಾಗ್ರತೆ ಮೂಡಿಸಬೇಕು.

ಈ ಮೇಲ್ಕಂಡ ಎಂಟು ಸೂತ್ರಗಳು ಸಹಕಾರಿ ಚಳವಳಿಯನ್ನು ಜನತೆಯ ಜನಸಮುದಾಯದ ಚಳವಳಿಯನ್ನಾಗಿ ಮಾಡುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

## ವಿನಾ ದೈನ್ಯೇನ ಜೀವನಂ

ಈ ವ್ಯಾಕ್ಯವು ಸನಾತನ ಭಾರತೀಯರು ಭಗವಂತನಲ್ಲಿ ಬೇಡಿಕೊಳ್ಳುವ ಪ್ರಾರ್ಥನೆ, ಮನುಷ್ಯನ ದೈನ್ಯತೆಯ ಜೀವಂತ ನರಕದ ಸರಿಸಮಾನವಾಗಿರುವುದು. ಇದರಿಂದ ಬಿಡುಗಡೆ ಹೊಂದಲು ಪ್ರತಿಯೊಬ್ಬನೂ ಯೋಚಿಸುತ್ತಾನೆ. ಮೊದಲನೆಯದಾಗಿ ಆರ್ಥಿಕ ದುರ್ಬಲತೆ ಮತ್ತು ಆರೋಗ್ಯ ದುರ್ಬತೆಯನ್ನು ಹೋಗಲಾಡಿಸಲು ಸಹಕಾರ ಚಳುವಳಿ ಒಂದು ದಿವ್ಯೌಷಧ. ಪ್ರತಿಯೊಬ್ಬನೂ ಆರ್ಥಿಕವಾಗಿ ಬಲಗೊಳ್ಳುವುದು ಸಹಕಾರಿ ಆಂದೋಲನದ ಮುಖ್ಯ ಉದ್ದೇಶ. ಈ ದಿಸೆಯಲ್ಲಿ ಸಹಕಾರಿಗಳು ಚಿಂತನೆ ಮಾಡುವುದು ಅವಶ್ಯಕ. ಎರಡನೆಯದಾಗಿ ಮನುಷ್ಯನಿಗೆ ಆರೋಗ್ಯ ಭಾಗ್ಯ ಮಹತ್ವದ್ದಾಗಿರುತ್ತದೆ. ಆರೋಗ್ಯವಿಲ್ಲದೇ ಮನುಷ್ಯನು ಏನನ್ನೂ ಸಾಧಿಸಲಾರನು. ಈ ದಿಸೆಯಲ್ಲಿ ಸಹಕಾರಿ ಸಂಸ್ಥೆಗಳು ಸದಸ್ಯರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ಸದಸ್ಯರು ಸದೃಢವಾಗುವಂತೆ ನೋಡಿಕೊಳ್ಳಬೇಕು. ತಮ್ಮ ಆರ್ಥಿಕ ಸದೃಢತೆಯ ಜೊತೆಗೆ ಸದೃಢವಾದ ಆರೋಗ್ಯದ ಬಗೆಗೂ ಸಂಘಗಳೂ ಚಿಂತನೆ ಮಾಡಬೇಕು.

ಸಹಕಾರಿ ಸಂಸ್ಥೆಗಳು ಜನತಾ ಚಳುವಳಿಯಾಗಿ ಸಂಪೂರ್ಣ ಸ್ವಾಯತ್ತತೆ ಸ್ವಾವಲಂಬನೆ ಮತ್ತು ಸ್ವಾಭಿಮಾನ ಈ ಮೂರು ಪ್ರಮುಖ ಅಂಶಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಸಹಕಾರಿ ಸಂಸ್ಥೆಗಳು ಸದಸ್ಯರುಗಳ ಕಾಮಧೇನು ಕಲ್ಪವೃಕ್ಷವಾಗಿ ಕಾರ್ಯನಿರ್ವಹಿಸಿದರೆ ಮಾತ್ರ ಚಳವಳಿಯ ಉದ್ದೇಶ ಸಂಪೂರ್ಣವಾಗಿ ಸಫಲತೆ ಹೊಂದುತ್ತದೆ. ಈ ಬಗ್ಗೆ ಸಹಕಾರಿಗಳು ಹಾಗೂ ಸಹಕಾರಿ ಚಳವಳಿಯಲ್ಲಿ ನಿಷ್ಠೆಯುಳ್ಳ ಶಾಸಕರು, ಸಂಸದರು ಗಮನ ಹರಿಸುವುದು ಅವಶ್ಯಕ. ಈ ಬೆಳವಣಿಗೆಯನ್ನು ಸಹಕಾರ ಕ್ಷೇತ್ರದಲ್ಲಿ 2001 ರಿಂದ ಇಚೇಗೆ ಪ್ರಾರಂಭವಾಗಿರುವ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಕಾಣಬಹುದಾಗಿದೆ. ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಸ್ವಾಯತ್ತತೆ, ಸ್ವಯಂ ಆಡಳಿತ ಹಾಗು ಸ್ವಯಂ ನಿಯಂತ್ರಣದ ಪ್ರಾಯೋಗಿಕವನ್ನು ಕಾಣಬಹುದಾಗಿದೆ. ಸಂಪೂರ್ಣ ಸ್ವಾಯತ್ತತೆಯ ಹಕ್ಕನ್ನು ಹೊಂದಿರುವ ಈ ಸೌಹಾರ್ದ ಸಹಕಾರಿಗಳು ಸ್ವಯಂ ಆಡಳಿತದ ಪರಿಭಾಷೆಯನ್ನು ಅರ್ಥಮಾಡಿಕೊಂಡು ತಮಗೆ ತಾವೇ ನಿಯಂತ್ರಣ ಮಾಡಿಕೊಳ್ಳವಲ್ಲಿ ಬಹುತೇಕ ಯಶಸ್ವಿಯಾಗುತ್ತಿರುವುದು ಕಂಡು ಬಂದಿದೆ.

ಸಹಕಾರಿ ಚಳುವಳಿ ಜನ ಸಮುದಾಯದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗಾಗಿಯೇ ಪ್ರಾರಂಭವಾಗಿರುವ ಚಳುವಳಿ ಇದನ್ನು ಸರಕಾರ ಹಾಗೂ ಸಾರ್ವಜನಿಕರು ಅರ್ಥಮಾಡಿಕೊಂಡು ಇದರ ದೈನಂದಿನ ಚಟುವಟಿಕೆಗಳಲ್ಲಿ ಮಾರ್ಗದರ್ಶನ ಮಾಡಬೇಕೆ ವಿನಹ ಹಸ್ತಕ್ಷೇಪಮಾಡುವುದು ಸಲ್ಲದು. ಸರಕಾರದ ಅನೇಕ ಜನಪ್ರಿಯ ಕಾರ್ಯಕ್ರಮಗಳನ್ನು ಈ ಸಹಕಾರ ಸಂಸ್ಥೆಗಳ ಮೂಲಕ ಜಾರಿಮಾಡುವ ಸಾಧನಗಳಾಗಬೇಕೇ ವಿನಹ ಇದೊಂದು ಆಯುಧವಾಗಿ ಕಾರ್ಯನಿರ್ವಹಿಸುವುದು ಸಲ್ಲದು.

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು–560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1–ಕೆ–ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪಾಂತೀಯ ಕಛೇರಿ: ನಂ 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ–585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010